# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY









ಸಂಪುಟ:01 Volume:01 • ಸಂಚಿಕೆ:219 Issue:219 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 25.01.2024 25.01.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2







# ಆಡಳಿತ ಜನರ ಮನೆಬಾಗಿಲಿಗೆ

**ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ | ಹಂಪಿ ಉತ್ಸವದಲ್ಲಿ ಎತ್ತು, ಕುರಿ, ಶ್ವಾನ, ಸಿರಿಧಾನ್ಯ ಪ್ರದರ್ಶನ, ಪಾಕಸ್ಪರ್ಧೆ ಇತರೆ**

**■ ಹಂಪಿ ಟೈಮ್ಸ್ ಹೊಸಪೇಟೆ**

ಜನತಾ ದರ್ಶನ ಸಿಎಂ ಸಿದ್ಧರಾಮಯ್ಯನವರ ಮಹತ್ವದ ಕಾರ್ಯಕ್ರಮವಾಗಿದೆ. ಆಡಳಿತವು ಜನರ ಮನೆಬಾಗಿಲಿಗೆ ಎಂಬುದು ನಮ್ಮ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಅರ್ಜಿ ಸಲ್ಲಿಸಲು ಬಂದ ಎಲ್ಲ ಅಹವಾಲುದಾರರ ಮನವಿಗಳನ್ನು ಸ್ವೀಕರಿಸಿ ಅವುಗಳ ಬಗ್ಗೆ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸಿ ಸ್ಪಂದನೆ ನೀಡುವುದಾಗಿ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಹೇಳಿದರು.

ತಾಲೂಕಿನ ಕಮಲಾಪುರದಲ್ಲಿ ಬುಧವಾರ ಜರುಗಿದ ಜನತಾ ದರ್ಶನದಲ್ಲಿ ಶಾಸಕರಾದ ಹೆಚ್.ಆರ್.ಗವಿಯಪ್ಪ ಹಾಗೂ ಎಂ.ಪಿ.ಲತಾ ಅವರ ಸಮ್ಮುಖದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಮಾತನಾಡಿದರು. ಕಮಲಾಪುರ ಸೇರಿದಂತೆ ಸೀತಾರಾಮ ತಾಂಡ, ಬುಕ್ಕಸಾಗರ, ವೆಂಕಟಾಪುರ, ಕಡ್ಡಿರಾಂಪುರ, ಮಲಪನಗುಡಿ ಸೇರಿದಂತೆ ವಿವಿಧ ಗ್ರಾಮಗಳಿಂದ ಜನರು ಸಾಲಾಗಿ ವೇದಿಕೆಗೆ ಬಂದು ಸಚಿವರಿಗೆ ತಮ್ಮ ಬೇಡಿಕೆಗಳನ್ನು ಸಲ್ಲಿಸಿದರು. ಕೆಲವು ಅಹವಾಲುಗಳ ಬಗ್ಗೆ ಅಧಿಕಾರಿಗಳೊಂದಿಗೆ ಸ್ಥಳದಲ್ಲಿಯೇ ಚರ್ಚಿಸಿ ಪರಿಹಾರ ಕಲ್ಪಿಸಿದರು. ಇನ್ನು ಕೆಲವು ಅರ್ಜಿಗಳ ಬಗ್ಗೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರಕ್ಕಾಗಿ ಸಂಬಂಧಿಸಿದ ಇಲಾಖೆಗಳಿಗೆ ವರ್ಗಾಯಿಸಿದರು.

>>3





ಶಾಸಕ ಹೆಚ್.ಆರ್.ಗವಿಯಪ್ಪ ಮಾತನಾಡಿ, ಜನರಿಗೆ ಅನುಕೂಲವಾಗುವಂತೆ ಜನತಾದರ್ಶನ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡುವಲ್ಲಿ ಮುತುವರ್ಜಿವಹಿಸುತ್ತಿದ್ದೇವೆ. ಜನರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಕಲ್ಪಿಸಿ ಬದುಕುವ ವಿಶ್ವಾಸ ತುಂಬುತ್ತೇವೆ. ಹಂಪಿ ಉತ್ಸವದಲ್ಲಿ ವಿಜಯನಗರ ಜಿಲ್ಲೆಯ ಹೆಚ್ಚಿನ ಕಲಾವಿದರಿಗೆ ಕಾರ್ಯಕ್ರಮ ಕೊಡಲು ಅವಕಾಶ ನೀಡಿದ್ದೇವೆ. ಹಂಪಿ ಉತ್ಸವ ಯಶಸ್ವಿಯಾಗಿ ನಡೆಯಲು ಎಲ್ಲರೂ ಸಹಕರಿಸಬೇಕು ಎಂದು ತಿಳಿಸಿದರು.



ಶಾಸಕಿ ಎಂ.ಪಿ.ಲತಾ ಮಾತನಾಡಿ, ಹಂಪಿ ಉತ್ಸವವನ್ನು ಜನೋತ್ಸವ ಎಂದು ಎಂ.ಪಿ.ಪ್ರಕಾಶ ಅವರು ಕರೆಯುತ್ತಿದ್ದರು. ಅವರ ಆಶಯದಂತೆ ಹಂಪಿ ಉತ್ಸವವು ನಿರಂತರವಾಗಿ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ. ಜಿಲ್ಲಾಡಳಿತವು ಎಲ್ಲರ ಸಹಕಾರ ಪಡೆದು ಉತ್ಸವ ಆಯೋಜನೆ ಮಾಡುತ್ತಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಗೊಳಿಸಬೇಕು ಎಂದು ಮನವಿ ಮಾಡಿದರು.

## ಈಬಾರಿಯ ಹಂಪಿ ಉತವದಲ್ಲಿ ಹೊಸ ಹೊಸ ಕಾರ್ಯಕ್ರಮ: ಡಿಸಿ

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮಾತನಾಡಿ, ರಾಜ್ಯ ಸರ್ಕಾರದ ಮಹತ್ವದ ಜನತಾ ದರ್ಶನದಲ್ಲಿ ಬಹುತೇಕ ಜನರಿಗೆ ಸ್ಥಳದಲ್ಲಿಯೇ ಪರಿಹಾರ ದೊರೆತು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ನಿರ್ದೇಶನ ನೀಡಿದಂತೆ, ಜನತಾ ದರ್ಶನ ಕಾರ್ಯಕ್ರಮದಲ್ಲಿ ಸ್ವೀಕೃತಗೊಂಡ ಅರ್ಜಿಗಳ ಬಗ್ಗೆ ಹಂತಹಂತವಾಗಿ ಪರಿಶೀಲಿಸಿ ಪರಿಹಾರ ಕಲ್ಪಿಸಲಾಗುವುದು ಎಂದು ತಿಳಿಸಿದರು. ಅಗತ್ಯವಿದ್ದಲ್ಲಿ ಮುಖ್ಯಮಂತ್ರಿಗಳ ಕಚೇರಿಗೆ ಸಹ ಅರ್ಜಿಗಳನ್ನು ಸಲ್ಲಿಸಿ ಪರಿಹಾರ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದರು.

**ಉತ್ಸವ ಜನೋತ್ಸವ:** ಹಂಪಿ ಉತ್ಸವ ಜನರ ಉತ್ಸವವಾಗಿದೆ. ರಾಜ್ಯದ ಉತ್ಸವವಾಗಿದೆ. ಫೆ.2, ಫೆ.3 ಮತ್ತು ಫೆ.4ರಂದು ನಡೆಯುವ ಉತ್ಸವಕ್ಕೆ ಸಾರ್ವಜನಿಕರು ಆಗಮಿಸಲು 100 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. 60 ಎಕರೆ ಪ್ರದೇಶವನ್ನು ತಾತ್ಕಾಲಿಕ ಪಾರ್ಕಿಂಗ್ ಮಾಡಲು ಸಹಕರಿಸಿದ ಜಮೀನುದಾರರಿಗೆ ಅಭಿನಂದನೆಗಳು. ಹಂಪಿ ಉತ್ಸವಕ್ಕೆ ಪ್ರತಿಯೊಬ್ಬರು ಸಹ ಸಹಕಾರ ನೀಡುತ್ತಿದ್ದಾರೆ. ಜಿಲ್ಲಾಡಳಿತವು ಈ ಬಾರಿ ಹಂಪಿ ಉತ್ಸವವನ್ನು ಜನೋತ್ಸವವನ್ನಾಗಿ ಮಾಡುವ ಸದಾಶಯ ಹೊಂದಿದೆ. ಈ ದಿಶೆಯಲ್ಲಿ ಈ ವರ್ಷ ಕೆಲವು ಹೊಸ ಹೊಸ ಕಾರ್ಯಕ್ರಮ ರೂಪಿಸಿದ್ದೇವೆ. ಎಲ್ಲರೂ ಭಾಗಿಯಾಗಿ ಯಶಸ್ವಿಗೊಳಿಸಬೇಕು ಎಂದು ಕೋರಿದರು.

**ಮೈಕ್ರೋ ನ್ಯೂಸ್**

## ಧ್ವನಿ ಬೆಳಕು ಕಾರ್ಯಕ್ರಮಕ್ಕೆ ಜ.26ರಂದು ಕಲಾವಿದರ ಆಯ್ಕೆ ಪ್ರಕ್ರಿಯೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾಡಳಿತ, ಕೇಂದ್ರ ಸಂವಹನ ಇಲಾಖೆ (ಸಂಗೀತ ಮತ್ತು ನಾಟಕ ವಿಭಾಗ) ಬೆಂಗಳೂರು, ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಂಪಿ ಉತ್ಸವ–2024ರ ಹಿನ್ನೆಲೆಯಲ್ಲಿ ವಿಜಯನಗರ ವೈಭವದ ಬೃಹತ್ ಧ್ವನಿ ಮತ್ತು ಬೆಳಕು ಕಾರ್ಯಕ್ರಮವು ಹಂಪಿಯ ಆನೆಲಾಯದ ಆವರಣದಲ್ಲಿ ಫೆ.02ರಿಂದ ಫೆ.08ರವರೆಗೆ ಆಯೋಜಿಸಲಾಗಿದೆ.

ಕಲಾವಿದರ ಆಯ್ಕೆ ಪ್ರಕ್ರಿಯೆಯನ್ನು ಜ.26ರ ಬೆಳಿಗ್ಗೆ 10 ರಿಂದ ನೌಕರರ ಭವನ, ಸಂಡೂರು ರಸ್ತೆ, ಹೊಸಪೇಟೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಕಲಾವಿದರು, ಭರತನಾಟ್ಯ ಪರಿಣಿತರು, ಬಾಲ ಕಲಾವಿದರು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು 02 ಸ್ಟ್ಯಾಂಪ್ ಸೈಜ್ ಭಾವಚಿತ್ರ, ವಿಳಾಸ ಖಚಿತಪಡಿಸುವ ಆಧಾರ್ ಕಾರ್ಡ್ ಅಥವಾ ಓಟರ್ ಐಡಿ ಕಾರ್ಡ್, ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣಪತ್ರ ಹಾಗೂ ತಾವು ಈ ಹಿಂದೆ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ಇರುವ ದಾಖಲಾತಿಗಳೊಂದಿಗೆ ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳದಲ್ಲಿ ನೀಡಲಾಗುವ ನಿಗದಿತ ಅರ್ಜಿಯನ್ನು ಭರ್ತಿ ಮಾಡಿ ಮೇಲೆ ತಿಳಿಸಿದ ದಾಖಲೆಗಳನ್ನು ಲಗತ್ತಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

ಆಯ್ಕೆಯಾದ ಕಲಾವಿದರು ಪೂರ್ವಸಿದ್ಧತಾ ತರಬೇತಿ ಹಾಗೂ 07 ದಿನಗಳ ಪ್ರದರ್ಶನ ಅವಧಿಗೆ ಯಾವುದೇ ಗೈರು ಹಾಜರಾತಿ ಇಲ್ಲದೇ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಕಲಾವಿದರ ಆಯ್ಕೆಯು ಆಯ್ಕೆ ಸಮಿತಿಯ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ ಎಂಬುದು ವಿಶೇಷ ಸೂಚನೆಯಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಶ್ರೀ ಗವಿಸಿದ್ಧೇಶ್ವರ ಜಾತ್ರೆ: ಜ.27 ರಿಂದ 'ಅಸ್ಮಿತೆ' ವಸ್ತು ಪ್ರದರ್ಶನ ಮೇಳ



**ಹಂಪಿ ಟೈಮ್ಸ್ ಕೊಪ್ಪಳ**

ಬೆಂಗಳೂರಿನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಜೀವನೋಪಾಯ ಅಭಿಯಾನ ಮತ್ತು ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೌಶಲ್ಯ ಮಿಷನ್ ಇವರ ಸಹಯೋಗದಲ್ಲಿ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ–2024ರ ಪ್ರಯುಕ್ತ ಶ್ರೀ ಗವಿಮಠದ ಜಾಗೃತಿ ನಡಿಗೆ "ಕಾಯಕ ದೇವೋಭವ" ಅಭಿಯಾನದಡಿ 'ಅಸ್ಮಿತೆ' ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜನವರಿ 27 ರಿಂದ ಫೆಬ್ರವರಿ 09ರವರೆಗೆ ಜಾತ್ರಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

'ಅಸ್ಮಿತೆ' ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವು ಜ.27 ರಿಂದ ಫೆ.09ರ ವರೆಗೆ ಬೆಳಿಗ್ಗೆ 10.30 ರಿಂದ ರಾತ್ರಿ 9.30 ಗಂಟೆಯ ವರೆಗೆ ನಡೆಯಲಿದ್ದು, ಜಾತ್ರೆಗೆ ಆಗಮಿಸುವ ಸಾರ್ವಜನಿಕರು ಅಸ್ಮಿತೆ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಭೇಟಿ ನೀಡಿ, ಸ್ವ–ಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸುವಂತೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಾಣೇಶ ತಿಳಿಸಿದ್ದಾರೆ.

## ಎತ್ತು, ಟಗರು, ಶ್ವಾನ ಪ್ರದರ್ಶನ: ಹೆಸರು ನೋಂದಾಯಿಸಿ

**■ ಹಂಪಿ ಟೈಮ್ಸ್ ಹೊಸಪೇಟೆ:**

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಂಪಿ ಉತ್ಸವ–2024 ಅಂಗವಾಗಿ ಫೆ.02ರಂದು ಜಿಲ್ಲಾ ಮಟ್ಟದ ಎತ್ತುಗಳ ಮತ್ತು ಫೆ.3ರಂದು ಜಿಲ್ಲಾಮಟ್ಟದ ಟಗರುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಎತ್ತುಗಳ ಹಾಗೂ ಟಗರುಗಳ ಮಾಲೀಕರು ಜ. 31ರೊಳಗೆ ಹತ್ತಿರದ ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತ ನೋಂದಣಿ ಮಾಡಬೇಕು. ಜಿಲ್ಲೆಯ ನಾನಾ ಭಾಗಗಳಿಂದ ಸುಮಾರು 200 ಜೋಡಿ ಎತ್ತುಗಳು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಉತ್ತಮವೆನಿಸಿದ ಜೋಡಿ ಎತ್ತುಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲಾಗುವುದು.

ಫೆ.03ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಮಟ್ಟದ ಟಗರುಗಳ ಪ್ರದರ್ಶನ ಹಮ್ಮಿಕೊಂಡಿದ್ದು, ಜಿಲ್ಲೆಯ ನಾನಾ ಭಾಗಗಳಿಂದ ವಿವಿಧ ತಳಿಗಳ ಸುಮಾರು 200 ಟಗರುಗಳು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಉತ್ತಮವೆನಿಸಿದ ಟಗರುಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲಾಗುವುದು.

**ಶ್ವಾನ ಪ್ರದರ್ಶನ ಹೆಸರು ನೋಂದಣಿಗೆ ಫೆ.3 ಕೊನೆಯ ದಿನ:**

ಮೊದಲ ಬಾರಿಗೆ ಜಿಲ್ಲಾ ಮಟ್ಟದ ಶ್ವಾನ ಪ್ರದರ್ಶನವು ಫೆ.4ರಂದು ನಡೆಯುತ್ತಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲೆಯ ನಾನಾ ಭಾಗಗಳಿಂದ ಸುಮಾರು 500 ಶ್ವಾನಗಳು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. 20 ವಿವಿಧ ತಳಿಯ ಶ್ವಾನಗಳು ಈ ಪ್ರದರ್ಶನಕ್ಕೆ ಆಗಮಿಸುತ್ತಿದ್ದು, ಹಲವಾರು ವಿಶೇಷ ತಳಿಯ ಶ್ವಾನಗಳನ್ನು ಪ್ರದರ್ಶನದಲ್ಲಿ ನೇರವಾಗಿ ಕಾಣುವ ಅವಕಾಶವನ್ನು ಈ ಪ್ರದರ್ಶನ ಒದಗಿಸಲಿದೆ. ಈ ಪ್ರದರ್ಶನದಲ್ಲಿ ಉತ್ತಮವೆನಿಸಿದ ಶ್ವಾನಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲಾಗುವುದು. ಹೆಚ್ಚಿನ ವಿವರಗಳು ಮತ್ತು ನೋಂದಣಿಗಾಗಿ 9448127848, 9900199899, 98445 24997, 8884023517, 70221 09535, 9448262516, 7411838030, 9535612937, 8610494205 ನಂಬರಗಳಿಗೆ ಸಂಪರ್ಕಿಸಬಹುದಾಗಿದೆ.

ಎಲ್ಲಾ ಶ್ವಾನಗಳಿಗೆ ಉಚಿತ ನೋಂದಣಿ ಇರುತ್ತದೆ ಮತ್ತು ಶ್ವಾನ ಪ್ರಿಯರೆಲ್ಲರಿಗೂ ಉಚಿತ ಪ್ರವೇಶವಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಲ್ಪಕಲೆಗಳಿಂದ ಹಂಪಿ ಪ್ರಸಿದ್ಧ

**■ ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024 ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಜನವರಿ 24ರಿಂದ ಜನವರಿ 31ರವರೆಗೆ ನಡೆಯುವ ಶಿಲ್ಪಕಲಾ ಶಿಬಿರಕ್ಕೆ ಶಾಸಕರಾದ ಹೆಚ್ ಆರ್ ಗವಿಯಪ್ಪ ಅವರು ಜನವರಿ 24ರಂದು ಚಾಲನೆ ನೀಡಿದರು.

ಹಂಪಿಯ ಗ್ರಾಮ ಪಂಚಾಯಿತಿ ಮುಂಭಾಗದ ಮಾತಂಗ ಪರ್ವತ ಮೈದಾನದಲ್ಲಿ ಜನವರಿ 24ರ ಸಂಜೆ ಶಿಲ್ಪಕ್ಕೆ ಪೂಜೆ ಸಲ್ಲಿಸಿ ಉಳಿ ಮತ್ತು ಸುತ್ತಿಗೆಯಿಂದ ಶಿಲ್ಪ ಕೆತ್ತುವ ಮೂಲಕ ಶಾಸಕರು ಶಿಬಿರಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಹಂಪಿಯು ಪ್ರಸಿದ್ಧವಾಗಿದ್ದೇ ಶಿಲ್ಪಕಲೆಗಳ ಮೂಲಕ. ಇಲ್ಲಿನ 50 ಎಕರೆಗಳ ಪ್ರದೇಶ ವ್ಯಾಪ್ತಿಯಲ್ಲಿ ಶಿಲ್ಪಕಲೆಯ ವೈಭವವೇ ಕಾಣುತ್ತದೆ. ಈ ಕಾರಣಕ್ಕಾಗಿ ಹಂಪಿಯು ಪ್ರವಾಸಿಗರನ್ನು



ಸೆಳೆಯುತ್ತಲೇ ಸಾಗುತ್ತಿದೆ ಎಂದರು.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ನಾಡಿನ ಅಭಿವೃದ್ಧಿಯ ಬಗ್ಗೆ ಕಾಳಜಿ ಹೊಂದಿದ್ದಾರೆ. ಅವರ ಪ್ರೋತ್ಸಾಹದಿಂದಲೇ ಜನರ ಆಶಯದಂತೆ ಹಂಪಿ ಉತ್ಸವ ಆಯೋಜನೆ ಮಾಡಲಾಗುತ್ತಿದೆ ಎಂದರು.

ಹಂಪಿ ಪ್ರದೇಶದ ಕಲೆ, ಶಿಲ್ಪಕಲೆ ಉಳಿಸಿ ಬೆಳೆಸಬೇಕು ಎಂಬುದು ನಮ್ಮ ಇಚ್ಛೆಯಾಗಿದೆ. ಹಂಪಿ ರಕ್ಷಣೆಗೆ ನಾವು ಬದ್ಧರಾಗಿದ್ದೇವೆ. ಐದು ವರ್ಷದಲ್ಲಿ ಹಂಪಿ ಸೇರಿದಂತೆ ರಾಜ್ಯದ ನಾನಾ ಭಾಗದ ಶಿಲ್ಪ ಕಲಾ ಸಂಪತ್ತನ್ನು ರಕ್ಷಿಸುವ ಕಾರ್ಯ ಸರ್ಕಾರದಿಂದ ನಡೆಯಲಿದೆ ಎಂದು ತಿಳಿಸಿದರು.

ಈ ಐದು ವರ್ಷದಲ್ಲಿ ಕಲಾವಿದರ ಪರವಾಗಿ ನಾವು ಕೆಲಸ ಮಾಡುತ್ತೇವೆ. ಕಲಾವಿದರ ಸಲಹೆ ಪಡೆದು ಶಿಲ್ಪಕಲಾ ರಕ್ಷಣೆ ಕಾರ್ಯ ಮಾಡುತ್ತೇವೆ ಎಂದರು. ಈ ವೇಳೆ ಹೊಸಪೇಟೆ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ರಮೇಶ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಹಂಪಿ ಗ್ರಾಮ ಪಂಚಾಯತ್ ಅಧ್ಯಕ್ಷೆ ರಜನಿ ಷಣ್ಮುಖ ಗೌಡ, ಸದಸ್ಯರಾದ ಕೆ ಗೋಪಾಲ, ಪಿಡಿಓ ಬಿ ಗಂಗಾಧರ ಹಾಗೂ ಇತರರು ಇದ್ದರು.

**ಕಲಾವಿದರ ಮನವಿ:** ಕಲಾವಿದರಾದ ಕೆ. ಕೆ.ಮಕಾಳಿ ಸೇರಿದಂತೆ ಇನ್ನಿತರ ಕಲಾವಿದರು ಶಾಸಕರೊಂದಿಗೆ ಶಿಲ್ಪಕಲಾ ರಕ್ಷಣೆಯ ಬಗ್ಗೆ ಚರ್ಚಿಸಿ ಉತ್ಸವಗಳು ನಡೆಯುವ ಸಂದರ್ಭದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು.







## ವಚನ ಅರಿವು

### ಶರಣರ ರೀತಿ

**ತನು ಶುದ್ಧ, ಮನ ಶುದ್ಧ, ಭಾವ ಶುದ್ಧವಾದವರನೆನಗೊಮ್ಮೆ ತೋರಾ?**
**ನಡೆಯೆಲ್ಲ ಸದಾಚಾರ; ನುಡಿಯೆಲ್ಲ ಶಿವಾಗಮ;**
**ನಿತ್ಯಶುದ್ಧರಾದವರನೆನಗೊಮ್ಮೆ ತೋರಾ?**
**ಕತ್ತಲೆಯ ಮೆಟ್ಟಿ ತಳವೆಳಗಾಗಿ**
**ಹೊರಗೊಳಗೊಂದಾಗಿ ನಿಂದ**
**ನಿಮ್ಮ ಶರಣರನೆನಗೊಮ್ಮೆ ತೋರಾ**
**ಚೆನ್ನಮಲ್ಲಿಕಾರ್ಜುನಾ.**

**– ಅಕ್ಕಮಹಾದೇವಿ**

ದೇಹವನ್ನು ಅನೈತಿಕವಾಗಿ ಬಳಸಿಕೊಳ್ಳದೆ, ಶುದ್ಧವಾಗಿಟ್ಟುಕೊಂಡು ನೈತಿಕವಾಗಿ ಬದುಕುವವರನ್ನು, ಮನಸ್ಸಿನಲ್ಲಿ ಎರಡು ಗುಣಗಳಿರದೆ, ಕೆಟ್ಟ ಗುಣವಿರದೆ ಇರುವವರನ್ನು, ಆಲೋಚನೆಗಳು ಸದಾ ಒಳ್ಳೆಯವಾಗಿರುವವರನ್ನು, ಒಳ್ಳೆಯ ಭಾವನೆಗಳಿರುವವರನ್ನು ಸಮಾಜ ಗೌರವದಿಂದ ಕಾಣುತ್ತದೆ. ಅಂತಹವರನ್ನು ಮಾತ್ರ ನಾನು ನೋಡಲು ಬಯಸುತ್ತೇನೆ ಎನ್ನುತ್ತಾಳೆ ಅಕ್ಕ. ಶುದ್ಧ ಜೀವನ ಮಾಡುವವರು ಬದುಕುವ ನಡೆಯೇ ಸದಾಚಾರದಿಂದ ಕೂಡಿರುತ್ತದೆ. ಅವರ ನುಡಿಯಲ್ಲಿ ಶಿವತತ್ತ್ವವಿರುತ್ತದೆ. ಅವರು ಬದುಕಿರುವವರೆಗೂ ಶುದ್ಧರಾಗಿರುತ್ತಾರೆ. ಅಜ್ಞಾನವನ್ನು ಮೆಟ್ಟಿನಿಂತು ಜ್ಞಾನದ, ಅರಿವಿನ ಬೆಳಕಿನಲ್ಲಿ ಅಂತರಂಗ–ಬಹಿರಂಗ ಎರಡರಲ್ಲೂ, ನಡೆ–ನುಡಿಯಲ್ಲಿ ಶುದ್ಧರಾಗಿ ಒಂದೇ ಭಾವವಾಗಿರುತ್ತಾರೆ. ಇಂತಹವರನ್ನು ಕಾಣುವ ಹಂಬಲ ಅಕ್ಕನದು. ಶರಣರಾಗುವ ಪರಿಯೂ ಇದೇ ಆಗಿದೆ ಅನ್ನುವ ಭಾವ ಈ ವಚನದಲ್ಲಿದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)




ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಸ್ಥಿತಿಗತಿ ಬಗ್ಗೆ ಪತ್ರಿಕೆಯಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಪರಿಶೀಲಿಸಲು ಸಚಿವರಾದ ಬಿ. ಜೆಡ್.ಜಹೀರ್ ಅಹ್ಮದ್ ಖಾನ್ ಕನ್ನಡ ವಿಶ್ವ ವಿದ್ಯಾಲಯಕ್ಕೆ ಬುಧವಾರ ಭೇಟಿ ನೀಡಿ, ತುರ್ತಾಗಿ ಬೇಕಾದ ಅನುದಾನ ಬಿಡುಗಡೆ ಬಗ್ಗೆ ಗಮನ ಹರಿಸಲಾಗುವುದು ಎಂದು ಬಿ. ಜೆಡ್.ಜಹೀರ್ ಅಹ್ಮದ್ ಖಾನ್ ಕುಲಪತಿಗೆ ತಿಳಿಸಿದರು.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕಥೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.


ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
**– ಜಾಹೀರಾತು ವ್ಯವಸ್ಥಾಪಕರು.**

# ಕುವೆಂಪು ಹೇಳಿದ ಎಮ್ಮೆಯ ಕತೆ



ಕುವೆಂಪು ಅವರ ಅಷ್ಟೊಂದು ಪ್ರಸಿದ್ಧವಲ್ಲದ ಒಂದು ಕತೆಯಿದೆ– 'ಶ್ರೀಮನ್ಮೂಕವಾಗಿತ್ತು'. ಬಹುಶಃ ಅವರು 30ರ ಪ್ರಾಯದ ಆಸುಪಾಸಿನಲ್ಲಿ ಬರೆದಿರಬಹುದಾದ ಕತೆಯಿದು. ಮೇಲ್ನೋಟಕ್ಕೆ ಮಕ್ಕಳ ಕತೆಯಂತೆ ಸರಳವಾಗಿದೆ. "ರಂಗನದು ಬಡ ಸಂಸಾರ. ಅವನ ವಾಸಕ್ಕೆ ಸಣ್ಣ ಹುಲ್ಲುಮನೆ; ನಾಲ್ಕೈದು ಅಂಕಣದ್ದು; ಅವನಿಗೆ ಏಳೆಂಟು ಕಾಲ್ನಡೆಗಳಿವೆ. ಅವನ ಜಮೀನು ಸ್ವಂತದ್ದಲ್ಲ' ಮುಂತಾದ ಪುಟ್ಟಪುಟ್ಟ ವಾಕ್ಯಗಳಿಂದ ಕೂಡಿದೆ. ಮಕ್ಕಳು ಮತ್ತು ಪ್ರಾಣಿಗಳೇ ಇಲ್ಲಿನ ಮುಖ್ಯ ಪಾತ್ರಗಳು. ಇದೇನೂ ಈ ಕತೆಗೇ ಇರುವ ವಿಶೇಷ ಲಕ್ಷಣವಲ್ಲ. ಕುವೆಂಪು ಅವರ ಮಹಾ ಕಾದಂಬರಿಗಳಲ್ಲೂ ಪ್ರಾಣಿ ಮತ್ತು ಮಕ್ಕಳ ಪಾತ್ರಗಳು ಬರುತ್ತವೆ. ಕತೆಯನ್ನು ಮಕ್ಕಳು ಓದಿದರೆ ಅವಕ್ಕೆ ಬೇಕಾದ ಅರ್ಥದ ಸ್ತರವೂ ಸಿಕ್ಕುತ್ತದೆ. ಕತೆ ತನ್ನ ಹೊಟ್ಟೆಯೊಳಗೆ ಅಡಗಿಸಿಕೊಂಡಿರುವ ದಾರ್ಶನಿಕ ಆಶಯಗಳನ್ನು ಕಂಡರೆ, ಇದು ಕೇವಲ ಮಕ್ಕಳ ಕತೆಯಲ್ಲ ಎಂದು ಭಾಸವಾಗುತ್ತದೆ. 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಕಥನಕವನವೂ ಹೀಗೇ.

ಮಹಾಕಾವ್ಯ–ಮಹಾ ಕಾದಂಬರಿಗಳನ್ನೂ ಮಕ್ಕಳ ಪದ್ಯಗಳನ್ನೂ ತರತಮವಿಲ್ಲದೆ ಬರೆದ ಲೇಖಕರಲ್ಲಿ ಕುವೆಂಪು ಕೂಡ ಒಬ್ಬರು. ಟಾಲ್‌ಸ್ಟಾಯ್ 'ಬೆಪ್ಪುತಕ್ಕಡಿ ಐವಾನ್' ಎಂಬ ಮಕ್ಕಳ ಕತೆಯನ್ನೂ 'ಅನ್ನಾಕರೆನೀನಾ' ಮಹಾ ಕಾದಂಬರಿಯನ್ನೂ ಸಮಾನ ಶ್ರದ್ಧೆಯಲ್ಲಿ ಬರೆದವನು. ಅವನ ನೀತಿಕತೆಗಳಲ್ಲಿ ಒಂದಾದ 'ಒಬ್ಬನಿಗೆ ಎಷ್ಟು ನೆಲಬೇಕು?' ಮಕ್ಕಳ ಕತೆಯಾಚೆ ಹೋಗಿಬಿಡುವ ಬಹುಪದರೀಯ ರಚನೆ. ಬಹುಶಃ ಈ ವಿಷಯದಲ್ಲಿ ಕುವೆಂಪು ಅವರ ಮೇಲೆ ಟಾಲ್‌ಸ್ಟಾಯ್‌ನ ಗಾಢ ಪ್ರಭಾವವಿದ್ದಂತಿದೆ. ಮಲೆಯಾಳದಲ್ಲಿ ವೈಕಂ ಬಶೀರರ 'ಪಾತುಮ್ಮಳ ಆಡು' 'ಬಾಲ್ಯಕಾಲ ಸಖಿ'ಗಳಲ್ಲೂ ಮಕ್ಕಳ ಮತ್ತು ಪ್ರಾಣಿ ಪಾತ್ರಗಳು ಬರುತ್ತವೆ. ಅವು ಕೂಡ ಏಕಕಾಲಕ್ಕೆ ಮಕ್ಕಳ ಮತ್ತು ವಯಸ್ಕ ಓದುಗ ಸ್ತರಗಳನ್ನು ಹೊಂದಿರುವ ಸರಳತೆ ಮತ್ತು ಗಹನತೆಯುಳ್ಳ ಕೃತಿಗಳು. ಈ ದೊಡ್ಡ ಲೇಖಕರೆಲ್ಲ ಆಳವಾದ ತತ್ವಶಾಸ್ತ್ರೀಯ ಬುನಾದಿಯ ಮೇಲೆ ಸರಳವಾಗಿ ಬರೆಯುವವರಾದ ಕಾರಣ, ಏನನ್ನು ಬರೆದರೂ ಅಲ್ಲೊಂದು ದಾರ್ಶನಿಕ ಛಾಪು ಸೃಷ್ಟಿಯಾಗಿಬಿಡುತ್ತದೆ. 'ಶ್ರೀಮನ್ಮೂಕವಾಗಿತ್ತು' ಕತೆಯನ್ನು ಅನೇಕ ಸಲ ಓದಿದ್ದೇನೆ. ಪ್ರತಿ ಓದಿನಲ್ಲೂ ಬೇರೆಬೇರೆ ಅರ್ಥ ಬಿಚ್ಚಿಕೊಡುತ್ತದೆ–ತಾಯಿ ಹಕ್ಕಿಯ ಪ್ರತಿ ಗುಟುಕಿನಲ್ಲೂ ಬೇರೆಬೇರೆ ಆಹಾರ ಇರುವಂತೆ.

ಕತೆಯ ಸಾರವಿದು: ಮಲೆನಾಡಿನಲ್ಲಿ ಕೆರೆಯೂರು ಎಂಬ ಒಂದು ಊರು. ಕೆರೆಯ ಪಕ್ಕ ಮನೆಯಿರುವುದರಿಂದ ಅದಕ್ಕೆ ಈ ಹೆಸರು. ಅಲ್ಲಿ ರಂಗನೆಂಬ ಗೇಣಿದಾರ ರೈತನ ಗುಡಿಸಲಿದೆ. ಅದರಲ್ಲಿ ಅವನೂ ಅವನ ಹೆಂಡತಿ ನಾಗಿಯೂ ಮಗ ಸೇಸನೂ ವಾಸವಾಗಿದ್ದಾರೆ. ಇವರು ಕೆಲವು ಕಾಲ್ನಡೆಗಳನ್ನು ಸಾಕಿದ್ದಾರೆ. ಅವುಗಳಲ್ಲಿ ಎಳಗರುವಿನ ತಾಯಿಯಾಗಿರುವ ಸೊಟ್ಟಕೋಡಿನ ಎಮ್ಮೆಯೂ ಒಂದು. ಮಳೆಗಾಲದ ಒಂದು ದಿನ. ರಂಗನು ದಿನವಿಡೀ ಗದ್ದೆ ಕೆಲಸ ಮಾಡಿ ಸಾಕಾಗಿ ಮನೆಗೆ ಬರುತ್ತಾನೆ. ಅವನಿಗೆ ಹಸಿವಾಗಿರುತ್ತದೆ. ಕೈಕಾಲು ತೊಳೆದು ನೀರೊಲೆ ಮುಂದೆ ಕೂತು ಮೈಬೆಚ್ಚಗಾಗಿಸಿಕೊಂಡು, ಮಗನ ಜತೆ ಊಟಕ್ಕೆ ಕೂರುತ್ತಾನೆ. ಅವನ ಎಲೆಯ ಮೇಲೆ ನಾಗಿ ಬಿಸಿಯಾದ ಅಡುಗೆ ಬಡಿಸುತ್ತಾಳೆ. ಇನ್ನೇನು ತುತ್ತು ಎತ್ತಬೇಕು, ಅಷ್ಟರಲ್ಲಿ ಕೊಟ್ಟಿಗೆಯೊಳಗಿಂದ ಎಮ್ಮೆಯ ಕರು ಕೂಗಿದ ಸದ್ದಾಗುತ್ತದೆ. ರಂಗ ದಿಗಿಲುಗೊಂಡು 'ಯಾಕೆ ತಾಯಿ ಎಮ್ಮೆ ಬಂದಿಲ್ಲವೇ?' ಎಂದು ವಿಚಾರಿಸುತ್ತಾನೆ. ನಾಗಿ 'ಯಾಕೊ ಇನ್ನೂ ಬಂದಿಲ್ಲ' ಎನ್ನುತ್ತಾಳೆ. ರಂಗ ಬಡಿಸಿದ ಎಲೆಯನ್ನು ಹಾಗೇ ಬಿಟ್ಟು ಕೊಟ್ಟಿಗೆಗೆ ಹೋಗಿ ನೋಡುತ್ತಾನೆ. ಕರು ಕಾಯಿಲೆಯಿಂದಲೂ ಹಸಿವಿನಿಂದಲೂ ತಾಯಿಲ್ಲದ ಕಾರಣದಿಂದಲೂ ಸುಸ್ತಾಗಿ ಬಿದ್ದಿದೆ. ಮರದ ಒಳಲೆಯ ಮೂಲಕ ಹಾಲು ಕುಡಿಸಲು ಯತ್ನಿಸುತ್ತಾನೆ. ಸಾಧ್ಯವಾಗುವುದಿಲ್ಲ. ಎಮ್ಮೆಯನ್ನು ಎಲ್ಲಿಯಾದರೂ ಹುಲಿಗಿಲಿ ಹಿಡಿದಿದೆಯೊ ಎಂದು ಅವನಿಗೆ ಆತಂಕ. ಅದನ್ನು ಹುಡುಕಲು ಬೆಳಕಿನ ದೊಂದಿ ಸಿದ್ಧಪಡಿಸಿಕೊಂಡು, ಊಟ ಮಾಡಿಯಾದರೂ ಹೋಗಿ ಎಂಬ ಹೆಂಡತಿಯ ವಿನಂತಿಯನ್ನೂ ಕೇಳದೆ, ನಾಯಿಯ ಜತೆ ಆ ಅಪರಾತ್ರಿಯಲ್ಲಿ ಆ ಕತ್ತಲ ಮಳೆಯಲ್ಲಿ ಹಸಿವಿನಲ್ಲಿ ಹೊರಟುಬಿಡುತ್ತಾನೆ. ಎಮ್ಮೆ ಹುಡುಕುತ್ತ ಅವನು ಒಂದು ರಾತ್ರಿ ಮತ್ತು ಅರ್ಧ ಹಗಲಿನ ಕಾಲ ಕಾಣುವ ಸನ್ನಿವೇಶ ಹಾಗೂ ಪಡೆಯುವ ಅನುಭವಗಳ ನಿರೂಪಣೆಯೇ ಕತೆ.

ಕತೆಯ ವಿನ್ಯಾಸ ಥೇಟು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ತರಹವೇ ಇದೆ. ಅಲ್ಲಿ ಗುತ್ತಿ ತನ್ನ ಪ್ರಿಯತಮೆಯನ್ನು ಕಾಣಲು ನಾಯಿಯ ಜತೆ ಪ್ರಯಾಣ ಮಾಡಿದಂತೆಲ್ಲ, ಹಾದಿಯ ಆಸುಪಾಸಲ್ಲಿ ಘಟಿಸುವ ಸನ್ನಿವೇಶಗಳು ಅವನ ಅನುಭವದ ಮೂಲಕ ಅನಾವರಣಗೊಳ್ಳುತ್ತ ಹೋಗುತ್ತವೆ; ಇಲ್ಲಿ ಎಮ್ಮೆ ಹುಡುಕುತ್ತ ಅಲೆಯುವ ರಂಗನ ಮೂಲಕ ಮಲೆನಾಡಿನ ಜೀವನ ವಿವರಗಳು ಬಿಚ್ಚಿಕೊಳ್ಳುತ್ತ ಹೋಗುತ್ತವೆ. ನಾಗಿ ನೀಳ್ಗತೆಯಲ್ಲೂ ಕಳೆದುಹೋದ ದನವನ್ನು ರಾತ್ರಿಯಿಡೀ ಹುಡುಕುವಿಕೆಯಿದೆ. ಮೂರು ಕಡೆ ಪಯಣ ಮತ್ತು ಹುಡುಕಾಟವಿದೆ.

ರಂಗನು ತನ್ನ ಪಯಣದಲ್ಲಿ ಮೂರು ಮನೆಗಳನ್ನು ಭೇಟಿಮಾಡುತ್ತಾನೆ. ಈ ಮನೆಗಳು ಸಮಾಜದ ವಿಭಿನ್ನ ಸಮುದಾಯಗಳಿಗೆ ಸೇರಿದವು. ಒಂದು– ದೀವರಾದ ಚೌಕಿಮನೆ ಸುಬ್ಬೇನಾಯ್ಕರ ಮನೆ. ನಾಯ್ಕರು ಅಪರಾತ್ರಿ ಕತ್ತಲಲ್ಲಿ ತಿರುಗುತ್ತಿರುವ ರಂಗನಿಗೆ ಬೈದು, ಬಾಯಿಗೆ ಎಲೆಯಡಿಕೆ ಕೊಟ್ಟು, ಆ ಹೊತ್ತಲ್ಲೂ ತಮ್ಮ ಮಗನನ್ನು ಎಬ್ಬಿಸಿ, ಎಮ್ಮೆ ಹೋದ ದಿಕ್ಕನ್ನು ತಿಳಿದುಕೊಂಡು ಹೇಳಿ ಸ್ಪಂದಿಸುವರು. ಎರಡು– ಕೀರಣಕೇರಿಯ ಜೋಯಿಸರಾದ ಶಂಕರ ಶಾಸ್ತ್ರಿಗಳ ಮನೆ. ರಂಗನು ಬೆಳಗು ಮುಂಚೆಯೇ ನಿಮಿತ್ತ ಕೇಳಲು ಬರಿಗೈಲಿ ಬಂದಿರುವುದಕ್ಕೆ ಜೋಯಿಸರು 'ಕಾಲ ಕೆಟ್ಟುಹೋಯಿತು' ಎಂದು ಗೊಣಗುತ್ತ, ಎಮ್ಮೆ ಬದುಕಿರಬಹುದು ಎಂದು ಅಂದಾಜು ನಿಮಿತ್ತ ಹೇಳುವರು. ಇದು ರಂಗನಲ್ಲಿ ಒಂದು ರೀತಿಯ ಆಶೆ–ಧೈರ್ಯ ಹುಟ್ಟಿಸುತ್ತದೆ. 3. ನಾಲೂರಿನ ಸಾಹುಕಾರರಾದ ನಾಗಣ್ಣಗೌಡರ ಮನೆ. ಗೌಡರ ಹಿರಿಯ ಮಗ ಓಬಯ್ಯಗೌಡನು, ಎಮ್ಮೆ ಗದ್ದೆಯ ಪೈರು ತಿಂದು ಹಾಳುಮಾಡಿದೆಯೆಂದೂ ಅದನ್ನು ದೊಡ್ಡಿಗೆ ಹೊಡೆಯಬೇಕೆಂದೂ ಕಟ್ಟಿಹಾಕಿದ್ದಾನೆ. ಮಾತ್ರವಲ್ಲ, ಅದರ ಹಿಂಗಾಲು ಕಟ್ಟಿ ಹಾಲನ್ನು ಸಹ ಹಿಂಡಿಕೊಂಡಿದ್ದಾನೆ. ಎಮ್ಮೆ ವಿಷಯದಲ್ಲಿ ಮೂರೂ ವ್ಯಕ್ತಿಗಳು ತೋರುವ ಪ್ರತಿಕ್ರಿಯೆಗಳು ಮೂರು ತೆರನಾಗಿವೆ.

ಕತೆಗೆ ನಾಟಕೀಯ ತಿರುವು ಬರುವುದು ಮೂರನೇ ಮನೆಯಲ್ಲಿ. ನಾಗನಗೌಡರ ಮನೆಯಲ್ಲಿ ಅವರ ಕಿರಿಯ ಮಗ ವಾಸು ಕಾಯಿಲೆ ಬಿದ್ದು, ಜೀವ ಇರುತ್ತದೊ ಹೋಗುತ್ತದೊ ಎಂಬಂತಹ ಅವಸ್ಥೆಯಲ್ಲಿ ಮಲಗಿರುತ್ತಾನೆ. ಅವನನ್ನು ನೋಡಲು ಊರ ಜನರೆಲ್ಲ ಜಗುಲಿಯಲ್ಲಿ ನೆರೆದಿರುತ್ತಾರೆ. ರಂಗನೂ ಜಗುಲಿಯಲ್ಲಿ ಸ್ವಲ್ಪ ಹೊತ್ತು ಕೂತು ವಾಸುವಿನ ಕಾಯಿಲೆಗೆ ಮರುಗುತ್ತಾನೆ. ಅವನಿಗೆ ತಾಯಿ ಸತ್ತು ಅನಾಥನಾಗಿರುವ ವಾಸುವಿನ ಹಾಗೂ ತಾಯನ್ನಗಲಿ ಏಕಾಂಗಿಯೂ ಕಾಯಿಲೆಯೂ ಆಗಿರುವ ಎಮ್ಮೆಗರುವಿನ ಸ್ಥಿತಿ ಒಂದೇ ಅನಿಸುತ್ತದೆ; ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ಅದನ್ನು "ಅಲ್ಲಿದ್ದವರ ಶೋಕವೆಲ್ಲಾ ಒಂದು ಜೀವದ ಯಾತನೆಗಾಗಿತ್ತು; ರಂಗನದು ಮಾತ್ರ ಎರಡು ಜೀವಗಳ ನೋವಾಗಿತ್ತು" ಎಂದು ಕತೆ ವ್ಯಾಖ್ಯಾನಿಸುತ್ತದೆ. ಹಸಿದಿರುವುದು ಕೇವಲ ಎಮ್ಮೆಯ ಕರುವಲ್ಲ, ರಂಗ ಕೂಡ. ಆದರೂ ರಂಗ ತನ್ನ ದುರವಸ್ಥೆಯಲ್ಲೂ ವಾಸುವಿನ ನೋವಿಗೆ ಮಿಡಿಯುತ್ತಾನೆ. ಓಬಯ್ಯಗೌಡ ಮನೆ ಹೊರಗೆ ಬಂದಾಗ, ರಂಗನೂ ಎದ್ದುಬಂದು ಅಳುತ್ತ, ತಾಯಿಲ್ಲದೆ ಹೋದರೆ ಎಳೆಗರು ಸತ್ತು ಹೋಗುತ್ತದೆಂದೂ ಎಮ್ಮೆಯನ್ನು ಬಿಟ್ಟುಕೊಡಬೇಕೆಂದೂ ಬೇಡುತ್ತಾನೆ. ಓಬಯ್ಯಗೌಡ ಕರಗುವುದಿಲ್ಲ. ಸಿಟ್ಟಿನಿಂದ ಕೂಗಾಡುತ್ತಾನೆ. ಗದ್ದಲ ಕೇಳಿದ ನಾಗನಗೌಡರು ಏನೆಂದು ಕರೆದು ಕೇಳಲು, ರಂಗ ಸನ್ನಿವೇಶ ವಿವರಿಸುತ್ತಾನೆ. ಇದನ್ನು ಕೇಳಿಸಿಕೊಂಡ ವಾಸು ಇದ್ದಕ್ಕಿದ್ದಂತೆ ನರಳುದನಿಯಲ್ಲಿ "ಪಾಪ! ಎಳೆಗರು. ಎಮ್ಮೆ ಹೊಡೆದುಕೊಂಡು ಹೋಗೋ ನೀನು ರಂಗಾ" ಎಂದು ಹೇಳುತ್ತಾನೆ. ಮಗುವಿನ ಬಾಯಿಂದ ಬಂದ ಆರ್ತದನಿಗೆ ಬೆಲೆಕೊಟ್ಟು ನಾಗನಗೌಡರು ಎಮ್ಮೆಯನ್ನು ಬಿಟ್ಟುಕೊಡುತ್ತಾರೆ. ರಂಗ ಎಮ್ಮೆ ಹೊಡೆದುಕೊಂಡು ವಾಸುವಿನ ಕಾಯಿಲೆ ಗುಣವಾಗಲೆಂದು ಹಾರೈಸುತ್ತ ಮನೆಗೆ ಬರುತ್ತಾನೆ.

ಕತೆಗೆ ಎರಡನೇ ನಾಟಕೀಯ ತಿರುವು ಬರುವುದು ಎಮ್ಮೆ ಮನೆಗೆ ಮರಳಿ ಬಂದ ಮೇಲೆ. ಎಮ್ಮೆ ಕೊಟ್ಟಿಗೆ ಬಂದೊಡನೆ ರಂಗ ಕರುವನ್ನು ಅದರ ಕೆಚ್ಚಲಿಗೆ ಹಿಡಿಯುತ್ತಾನೆ. ಕರು ಹಾಲನ್ನು ಕೊಂಚ ಚಪ್ಪರಿಸಿ ನಿಲ್ಲಲು ಶಕ್ತಿಯಿಲ್ಲದೆ ನೆಲಕ್ಕೆ ಕುಸಿಯುತ್ತದೆ. ಎಮ್ಮೆ ತನ್ನ ಕರುವನ್ನು ವಾತ್ಸಲ್ಯದಿಂದ ನೆಕ್ಕತೊಡಗುತ್ತದೆ. ಅದೇ ಹೊತ್ತಿಗೆ ನಾಲೂರ ಮನೆಯಲ್ಲಿ ನಾಗನಗೌಡರು ಜ್ವರದಲ್ಲಿ ಬೇಯುತ್ತಿದ್ದ ವಾಸುವಿನ ಹಣೆಯ ಮೇಲೆ ಕೈಯಾಡಿಸುತ್ತಿರುವಾಗ, ಮಗುವಿನ ಜ್ವರ ಇಳಿದಿರುವುದು ಗೊತ್ತಾಗುತ್ತದೆ. ಅವರು ಆಶ್ಚರ್ಯದಿಂದ ಹಿಗ್ಗಿ "ನೋಡಿದಿರೋ! ನಮ್ಮ ಜೋಯಿಸರ ವಿಭೂತಿ ಮಹಿಮೆ. ಹುಡುಗಗೆ ಜ್ವರ ಬಿಟ್ಟೇ ಹೋಗದೆ!" ಎಂದು ಅಲ್ಲಿದ್ದವರಿಗೆಲ್ಲ ಕೂಗಿ ಹೇಳುತ್ತಾರೆ. ಅವರ ಹೇಳಿಕೆಗೆ ಎಮ್ಮೆಯ ಪ್ರತಿಕ್ರಿಯೆಯನ್ನು ದಾಖಲಿಸುವ ಮೂಲಕ ಕತೆ ಮುಗಿಯುತ್ತದೆ: "ದೂರದ ಕೆರೆಯೂರಿನಲ್ಲಿ ತನ್ನ ಮುದ್ದುಕರುವನ್ನು ಮೂಸಿ ನೆಕ್ಕುತ್ತಿದ್ದ ಮೂಗುಪ್ರಾಣಿಯ ಆನಂದದ ವಿಭೂತಿ, ಅದನ್ನಾಲಿಸಿ ಶ್ರೀಮನ್ಮೂಕವಾಗಿತ್ತು!

ಕತೆಯ ಜೀವಾಳವೆಲ್ಲ 'ಶ್ರೀಮನ್ಮೂಕವಾಗಿತ್ತು' ಹಾಗೂ 'ವಿಭೂತಿ' ಎಂಬ ಪದಗಳಲ್ಲಿ ತುಂಬಿಕೊಂಡಿದೆ. ಕುವೆಂಪು ಸಾಹಿತ್ಯದಲ್ಲಿ 'ಶ್ರೀ' ಎನ್ನುವುದು, ಲೋಕದ ಕಣ್ಣಲ್ಲಿ ಸಾಮಾನ್ಯ ಎನಿಸಿಕೊಂಡಿರುವ ಸಂಗತಿಯನ್ನು ಘನತೀಕರಿಸಲು ಬಳಕೆಯಾಗುವ ತಾತ್ವಿಕ ಪರಿಭಾಷೆ. ಉದಾಃ ಶ್ರೀಸಾಮಾನ್ಯ, ಶ್ರೀಮುಡಿ ಇತ್ಯಾದಿ. ಕತೆಯಲ್ಲೂ ಎಮ್ಮೆಯ ಮೂಕತನವು 'ಶ್ರೀಮತ್' ವಿಶೇಷಣದ ಮೂಲಕ ಅನುಭೂತಿಯ ಮಟ್ಟಕ್ಕೇರುತ್ತದೆ. 'ಮನ್ಮೂಕ' ಪದದಲ್ಲಿ ಮನುಷ್ಯರಂತೆ ಮಾತನಾಡಲಾಗದ ಮೂಕಪ್ರಾಣಿ ಎಂಬರ್ಥದ ವಿವರಣೆಯಿದೆ. ಜತೆಗೆ ನಡೆದ ಘಟನೆಗಳಿಂದ ಎಮ್ಮೆ ವಿಸ್ಮಯಪಟ್ಟು ಮೂಕವಾಯಿತು ಎಂಬರ್ಥವೂ ಇದೆ. ಅದರ ವಿಸ್ಮಯದಲ್ಲಿ ತನ್ನನ್ನು ಕರುವಿನೊಂದಿಗೆ ಕೂಡಿಸಿದ್ದಕ್ಕಾಗಿ ತಾಯಿಯಾದ ತಾನೂ ರಂಗನೂ ಸೇರಿ ವಾಸುವಿನ ಜೀವಕ್ಕಾಗಿ ಮಾಡಿದ ಪ್ರಾರ್ಥನೆಗಳ ಫಲವನ್ನು, ಜೋಯಿಸರ ವಿಭೂತಿ ಮಹಿಮೆಯು ಬಾಚಿಕೊಂಡಿರುವುದರ ಬಗ್ಗೆ ಸಣ್ಣಗಿನ ವ್ಯಂಗ್ಯವೂ ಇದೆ; ಅಮೂರ್ತವೂ ಅಲೌಕಿಕವೂ ಆದ ಜೀವಕರುಣೆಯ ಹರಿವಿನಿಂದ ಸಂಭವಿಸಿದ ಯಶಸ್ಸನ್ನೆಲ್ಲ, ಜೋಯಿಸರ ವಿಭೂತಿಗೆ ನಿರುಮ್ಮಳವಾಗಿ ವರ್ಗಾಯಿಸಿದ ನಾಗನಗೌಡರ ಅವೈಚಾರಿಕತೆಯ ವಿಮರ್ಶೆಯೂ ಇದೆ.

ಕುವೆಂಪು ದರ್ಶನಲ್ಲಿ 'ವಿಭೂತಿ' ಎನ್ನುವುದು ಅಲೌಕಿವಾದುದು ಭವ್ಯವಾದುದು ಸುಂದರವಾದುದು ಎಂಬರ್ಥಗಳನ್ನು ಪಡೆದಿರುವ ಪರಿಭಾಷೆ. ಇದಕ್ಕೆ ಕತೆಯ ಕೊನೇ ಸಾಲಿನಲ್ಲಿ ಬರುವ 'ಆನಂದದ ವಿಭೂತಿ' ಎಂಬ ಮಾತು ಸಾಕ್ಷಿ. ಅವರ 'ವಿಭೂತಿ ಪೂಜೆ' ಲೇಖನವನ್ನು ನೆನೆಯಬಹುದು. ಮಾತು ಬಾರದ ಎಮ್ಮೆಯು ಲೋಕದ ವಿದ್ಯಮಾನಗಳಿಗೆ ಅವ್ಯಕ್ತ ಹೃದಯವಂತಿಕೆಯಿಂದ ಸ್ಪಂದಿಸುತ್ತ ತನ್ನದೇ ಭಾಷೆಯಲ್ಲಿ 'ಆನಂದದ ವಿಭೂತಿ'ಯನ್ನು ಅನುಭವಿಸುತ್ತಿದೆ– ಕವಿಯಂತೆ, ದಾರ್ಶನಿಕರಂತೆ. ಇದಕ್ಕೆ ಹೋಲಿಸಿದರೆ, ಇಲ್ಲಿ ಬರುವ ಜೋಯಿಸರು ಕೊಡುವ 'ವಿಭೂತಿ'ಯು ಮಾನವರ ವಿವೇಚನಾ ಶಕ್ತಿಯನ್ನು ಒತ್ತೆಪಡೆದು ಮೌಢ್ಯದ ಮೇಲೆ ಹುಟ್ಟಿದ ಬರೀ ಬೂದಿ. ವಿಭೂತಿಯ ಈ ಎರಡೂ ಮುಖಗಳನ್ನು ಕತೆ ಮುಖಾಮುಖಿಯಾಗಿಸುತ್ತದೆ.

ಕತೆಯಲ್ಲಿ ಮಾರ್ಮಿಕವಾದುದು, ಮೂಕಪ್ರಾಣಿ ಹಾಗೂ ಮಕ್ಕಳ ಪ್ರಜ್ಞೆಯ ಮೂಲಕ ಬುದ್ಧಿಯುಳ್ಳ ಮನುಷ್ಯರ ವರ್ತನೆಗಳನ್ನು ನೋಡುವ, ವಿಶ್ಲೇಷಿಸುವ ಮತ್ತು ಮೌಲ್ಯಮಾಪನ ಮಾಡುವ ವಿನ್ಯಾಸ. ಮನುಷ್ಯ ವರ್ತನೆಗಳ ವಿಮರ್ಶೆ ಮಾಡಲು ಮನುಷ್ಯರ ದೃಷ್ಟಿಕೋನ ಬಳಸುವುದು ಸಹಜ. ಪ್ರಾಣಿ ವರ್ತನೆಗಳ ವಿಶ್ಲೇಷಣೆಗೂ ಮನುಷ್ಯರ ಬುದ್ಧಿಶಕ್ತಿ ಬಳಕೆಯಾಗುತ್ತದೆ. ಆದರೆ ಕುವೆಂಪು ಸಾಹಿತ್ಯದಲ್ಲಿ ಇದು ಉಲ್ಟಾ ಆಗಬಲ್ಲದು. ಗುತ್ತಿಯ ವರ್ತನೆಯನ್ನು ಅವನ ನಾಯಿಯ ದೃಷ್ಟಿಕೋನದಲ್ಲಿ ತೋರಿಸುತ್ತ, ಮೌಲ್ಯಮಾಪನ ಮಾಡುವ ಪ್ರಸಂಗಗಳು ಅವರ ಕಾದಂಬರಿಗಳಲ್ಲಿ ಬರುತ್ತವೆ. ಹಾಗೆಯೇ ದೊಡ್ಡವರೆನಿಕೊಂಡವರ ವರ್ತನೆಗಳನ್ನು ಮಕ್ಕಳ ಮೂಲಕ ಕಾಣಿಸುತ್ತ ವಿಮರ್ಶೆಗೆ ಒಡ್ಡುವ ಪ್ರಸಂಗಗಳೂ ಬರುತ್ತವೆ. ಮುಖ್ಯ ಪ್ರಶ್ನೆಯೆಂದರೆ, ಮಕ್ಕಳ ಮೂಲಕ ದೊಡ್ಡವರ ಲೋಕವನ್ನು ನೋಡಲು ಕುವೆಂಪು ಯಾಕೆ ಮತ್ತೆಮತ್ತೆ ಯತ್ನಿಸುತ್ತಾರೆ?

1. ಎಳೆಯವರು ಸಮಾಜದಲ್ಲಿರುವ ಜಾತಿ ಮತ ಅಂತಸ್ತು ಲಿಂಗಭೇದ ಇತ್ಯಾದಿ ಕಾಯಿಲೆಗಳಿಗೆ ಒಳಗಾಗದೆ, ಸರಳವಾಗಿ ನೇರವಾಗಿ ವಿಶ್ವಮಾನವರಾಗಿ ಲೋಕವನ್ನು ಗಮನಿಸುವುದರಿಂದ; ತರತಮ ಭೇದ ಮಾಡದ ಮಕ್ಕಳ ಮತ್ತು ಪ್ರಾಣಿಗಳ ಕಣ್ಣಲ್ಲಿ ಬೆಳೆದವರು ದೊಡ್ಡವರು ಶ್ರೇಷ್ಠರು ಎನಿಸಿಕೊಂಡವರ ಮೌಢ್ಯ ಸಣ್ಣತನ ಮತ್ತು ಲೋಕದ ಡೊಂಕುಗಳು ಅನಾವರಣಗೊಳ್ಳುತ್ತ ಹೋಗುತ್ತವೆ. ಎಲ್ಲ ಮನುಷ್ಯರು ಹುಟ್ಟುತ್ತಲೇ ವಿಶ್ವಮಾನವರಾಗಿದ್ದು ಬೆಳೆಯುತ್ತ ಜಾತಿಮತಗಳ ಅಂಕುಶಕ್ಕೆ ಒಳಗಾಗಿ ಅಲ್ಪಮಾನವರಾಗುತ್ತಾರೆ. ಅವರನ್ನು ವಿಶ್ವಮಾನವರಾಗಿಸಲು ಮತ್ತೊಮ್ಮೆ ಯತ್ನಿಸಬೇಕಾಗುತ್ತದೆ ಎಂದು ಕುವೆಂಪು ಭಾವಿಸಿದವರು. ಸರ್ವಜೀವಿಗಳ ಎದೆಯಲ್ಲಿ ಹುದುಗಿರುವ ಜೀವಕರುಣೆ ಸದಾ ಜಿನುಗಿ ಹರಿಯುತ್ತ ಲೋಕದ ಬದುಕನ್ನು ಸಹ್ಯವಾಗಿಸುತ್ತದೆ. ಆದರೆ ಮನುಷ್ಯರಲ್ಲಿ ಅದರ ಸರಾಗ ಹರಿವಿಗೆ ಲೋಕದ ಅನೇಕ ಉಪಾಧಿಗಳು ತಡೆಯೊಡ್ಡಿವೆ. ಕರುವಿಲ್ಲದ ಎಮ್ಮೆಯಿಂದ ಹಾಲನ್ನು ಹಿಂಡಿಕೊಳ್ಳುವುದು, ಜನರ ಅಸಹಾಯಕತೆಯನ್ನು ಬಳಸಿ ಕುರುಡುಶ್ರದ್ಧೆ ಬೆಳೆಸುವುದು–ಇಂತಹ ಉಪಾಧಿಗಳು. ಆದರೆ ವಾಸುವಿನಂತಹ ಮಕ್ಕಳಿಗೆ ತಾಯನ್ನಗಲಿರುವ ಕರುವಿನ ವೇದನೆ ತಟ್ಟನೆ ವೇದ್ಯವಾಗುತ್ತದೆ. ಒಂದು ಮಗು ಹಿರಿಯರ ಮುಚ್ಚಿದ ಕಣ್ಣನ್ನು ತನ್ನ ಸಹಜ ನಿರುದ್ದಿಶ್ಯ ನಡೆಯಿಂದ ತೆರೆಸಬಲ್ಲದು. ಅದಕ್ಕೆ ಮನುಷ್ಯ ಮತ್ತು ಪ್ರಾಣಿಗಳ ನಡುವೆ, ಚರಾಚರಗಳ ನಡುವೆ, ಜಡ–ಚೇತನಗಳ ನಡುವೆ ಭೇದವೆಣಿಸದ ಅದ್ವೈತದೃಷ್ಟಿ ಅಥವಾ ಸಮಾಜವಾದಿ ದರ್ಶನ ಸಾಧ್ಯವಾಗಿರುತ್ತದೆ. ಹೀಗಾಗಿಯೇ ಇಲ್ಲಿ ವಾಸು ರಂಗ ಎಮ್ಮೆಗರು ಎಲ್ಲರೂ ಸಮಾನ ಮನಸ್ಕತೆಯಲ್ಲಿ ಏಕೀಭವಿಸಿದ್ದಾರೆ.

2. ಮಕ್ಕಳು ಲೋಕಕ್ಕೆ ಹೊಸಬರಾಗಿದ್ದು ಲೋಕದ ಚರಾಚರವನ್ನು ಮುಗ್ಧವಾಗಿ ಅಪಾರ ಬೆರಗಿನಿಂದ ನೋಡುತ್ತವೆ. ಅವಕ್ಕೆ ಪರಿಸರದಲ್ಲಿ ಇರುವ ಸಣ್ಣಪುಟ್ಟ ಸಂಗತಿಗಳೂ ವಿನೂತನವಾಗಿ ಅದ್ಭುತವಾಗಿ ಕಾಣಿಸಬಲ್ಲವು. ನಿತ್ಯಬದುಕಿನ ಸವೆನೋಟಕ್ಕೆ ಸಿಕ್ಕು ಹಳತಾಗಿರುವ ಸಂಗತಿಗಳನ್ನು ಹೊಸದೆಂಬಂತೆ ಅವು ನೋಡಬಲ್ಲವು. ಕವಿಗಳೂ ದಾರ್ಶನಿಕರೂ ಇದನ್ನು ತಾನೇ ಮಾಡುವುದು? ಯಾವ ಕಷ್ಟವೂ ಇಲ್ಲದೆ ಸರಳವಾಗಿ ಹುಟ್ಟಿರುವ ಒಂದು ಪುಟ್ಟ ಕತೆ, ಎಷ್ಟೊಂದು ಅರ್ಥಗಳನ್ನು ಹುದುಗಿಸಿಕೊಂಡಿದೆ! ರಂಗನ ಮನೆಯನ್ನು "ಮಲೆನಾಡಿನ ಹುಲ್ಲಿನ ಮನೆಯು ಬೇಟೆನಾಯಿಗಳ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಪೊದೆಯಲ್ಲಿ ಅಡಗಿದ ಮೊಲದಂತೆ, ಮರಗಳ ಗುಂಪಿನ ನಡುವೆ ತಲೆಮರೆಸಿಕೊಂಡಿತ್ತು' ಎಂದು ಕತೆ ಬಣ್ಣಿಸುವುದುಂಟು. ಕತೆಯಲ್ಲಿ ಧರ್ಮ ದೈವ ಜಾತಿ ಆಸ್ತಿಗಳ ಹೆಸರಲ್ಲಿ ಯಾರು ಯಾರನ್ನು ಬೇಟೆ ಆಡುತ್ತಿದ್ದಾರೆ? ತನ್ನ ಎಮ್ಮೆಯನ್ನು ಹುಲಿ ಹಿಡಿರಬಹುದೇನೊ ಎಂಬ ರಂಗನ ಭಯ ಸುಳ್ಳಾಗುತ್ತದೆ. ಅವನಂತಹವರ ಬದುಕಿನಲ್ಲಿ ಬೇಟೆಯಾಡುವ ಹುಲಿಗಳು ಬೇರೆಯೇ ಇವೆ; ರಂಗನದು ಹುಲ್ಲಿನ ಸಣ್ಣಮನೆ. ಆದರೆ ಅವನ ಹೃದಯ ಕರುಣೆ ಪ್ರೀತಿಯಿಂದ ತುಂಬಿದೆ; ಇಲ್ಲಿನ ಎಮ್ಮೆಗೆ ಸೊಟ್ಟಕೋಡಿದೆ. ಆದರೆ ಇಲ್ಲಿನ ಕೆಲವು ದೊಡ್ಡ ಮನುಷ್ಯರ ಬುದ್ಧಿಯೇ ಸೊಟ್ಟ; ಮಕ್ಕಳು ದೈಹಿಕವಾಗಿ ರೋಗಿಗಳಾಗಿವೆ. ಆದರೆ ಅವುಗಳ ಮನಸ್ಸು ವಿಶಾಲವಾಗಿದೆ– ಬಗೆದಷ್ಟೂ ಅರ್ಥಗಳು!



**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

## ಕನ್ನಡ ವಿಶ್ವವಿದ್ಯಾಲಯದ ಸ್ಥಿತಿಗತಿ ಪರಿಶೀಲಿಸಿದ ಸಚಿವ ಜಮೀರ್ ಖಾನ್

**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಸ್ಥಿತಿಗತಿ ಬಗ್ಗೆ ಪತ್ರಿಕೆಯಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಪರಿಶೀಲಿಸಲು ಸಚಿವರಾದ ಬಿ.ಜೆಡ್.ಜಹೀರ್ ಅಹ್ಮದ್ ಖಾನ್ ಅವರು ಬುಧವಾರ ಖುದ್ದು ಹಂಪಿಯ ಕನ್ನಡ ವಿಶ್ವ ವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪೂರ್ವ ನಿಗದಿಯಂತೆ ಕಮಲಾಪುರದಲ್ಲಿ ಜನತಾ ದರ್ಶನ ಕಾರ್ಯಕ್ರಮದ ಬಳಿಕ ಸಚಿವರು ನೇರವಾಗಿ ಹಂಪಿ ವಿಶ್ವ ವಿದ್ಯಾಲಯಕ್ಕೆ ಆಗಮಿಸಿ ಸಭೆ ನಡೆಸಿದರು.

ಇದೆ ವೇಳೆ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ವಿಶ್ವ ವಿದ್ಯಾಲಯದ ಸ್ಥಿತಿಗತಿಗಳ ಬಗ್ಗೆ ಮಾಹಿತಿ ನೀಡಿದರು.

ಆಡಳಿತ ಸಿಬ್ಬಂದಿಯ ವೇತನ 7 ತಿಂಗಳಿನಿಂದ 1.32 ಕೋಟಿ ರೂ ಬಾಕಿ ಇದೆ. ಗೆಸ್ಟ್ ಪ್ಯಾಕಲ್ಟಿಗೆ ನೀಡಬೇಕಾದ 1.48 ಕೋಟಿ ರೂ ಮಾರ್ಚದಿಂದ ಬಾಕಿ ಇದೆ. ಹೊರಗುತ್ತಿಗೆ ವೇತನ 1.48 ಕೋಟಿ ರೂ ಬಾಕಿ ಇದೆ. ವಿಶ್ವವಿದ್ಯಾಲಯಕ್ಕೆ 10 ಕೋಟಿ ಅನುದಾನ ಬೇಕಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವಣೆ ನೀಡಿದ್ದೇವೆ ಎಂದು ತಿಳಿಸಿದರು.

ಈ ಹಿಂದೆ ಕೆಕೆಆರ್ಡಿಬಿಯಿಂದ ವಿಶ್ವ ವಿದ್ಯಾಲಯಕ್ಕೆ ನಿಗದಿಪಡಿಸಿದ 20 ಕೋಟಿ ರೂ.ಗಳಲ್ಲಿ 10 ಕೋಟಿ ಅನುದಾನವನ್ನು ವಿದ್ಯಾರ್ಥಿಗಳ ಒತ್ತಾಯದಂತೆ ಮುಖ್ಯಮಂತ್ರಿಗಳ ವಿವೇಚನೆಯಡಿ ಕಟ್ಟಡದ ಬದಲಾಗಿ ಫೆಲೋಶಿಪ್, ಸ್ಕಾಲರಸಿಪಗೆ ಬಳಸಲಾಗಿದೆ. ಇದರಿಂದಾಗಿ ಕಟ್ಟಡಕ್ಕೆ ಅನುದಾನದ ಅವಶ್ಯಕತೆ ಇದೆ. ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳು ಸುಗಮವಾಗಿ ನಡೆಯಲು ಪ್ರತಿ ತಿಂಗಳು 40 ಲಕ್ಷದಂತೆ ವರ್ಷಕ್ಕೆ 9 ಕೋಟಿ ರೂ. ಬೇಕಾಗುತ್ತದೆ ಎಂದು ಕುಲಪತಿಗಳು ತಿಳಿಸಿದರು.

30 ವರ್ಷದ ಹಳೆಯ ನೀರಿನ ಲೈನ್ ದುರಸ್ತಿ, ನೀರಿನ ಟ್ಯಾಂಕರ್ ನಿರ್ಮಾಣ, ಪ್ರಸಾರಂಗ ಕಟ್ಟಡದ ದುರಸ್ತಿ ಸೇರಿದಂತೆ ವಿವಿಯ ವಿವಿಧ ಕಾಮಗಾರಿಗಳಿಗೆ ಅಂದಾಜ 20 ಕೋಟಿ ರೂ ಅವಶ್ಯಕತೆ ಇದೆ ಎಂದು ಕುಲಪತಿಗಳು ಸಚಿವರ ಮುಂದೆ ಬೇಡಿಕೆ ಇಟ್ಟರು.

ತಿಂಗಳೊಳಗೆ ಸರಿಪಡಿಸುವೆ: ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿಗಳ ಜೊತೆಗೆ ಮತ್ತು ಸಂಬಂಧಿಸಿದ ಶಾಸಕರ ಜೊತೆಗೆ ಚರ್ಚಿಸಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ತುರ್ತಾಗಿ ಬೇಕಾದ ಅನುದಾನ ಬಿಡುಗಡೆ ಬಗ್ಗೆ ಗಮನ ಹರಿಸಲಾಗುವುದು ಎಂದು ಬಿ.ಜೆಡ್.ಜಹೀರ್ ಅಹ್ಮದ್ ಖಾನ್ ಅವರು ಹೇಳಿದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನರಾಜ್ ಸಿಂಗ್, ಜಿಲ್ಲಾಧಿಕಾರಿಗಳಾದ ಎಂ. ಎಸ್.ದಿವಾಕರ, ಜಿಪಂ ಸಿಇಓ ಸದಾಶಿವ ಪ್ರಭು ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಮರೇಶ ಯಾತಗಲ್ ಹಾಗೂ ಇತರರು ಇದ್ದರು.


# ಹಳ್ಳಿಗಳಲ್ಲಿ ನಮ್ಮೂರ ನಾಟಕದ್ದೇ ಸುದ್ದಿ

## ಹೊಳಗುಂದಿಯ ನಾಟಕ ಇತಿಹಾಸಕ್ಕೆ ಮತ್ತೊಂದು ಗರಿ। ಯುವ ಕವಿ ಎ.ಎಂ.ಪಿ ಸಂದೀಪ್ ರಚನೆಯ ನಾಟಕಗಳಿಗೆ ಮೆಚ್ಚುಗೆ

ಹೊಳಗುಂದಿಯ ಸಿದ್ದೇಶ್ವರನ ಜಾತ್ರೆ ಎಂದರೆ ಅದು ನಾಟಕದ್ದೇ ಮಾತು .ಸುತ್ತ ಹತ್ತುಹಳ್ಳಿ ಜನರ ಬಾಯಲ್ಲಿ ನಮ್ಮೂರ ನಾಟಕದ್ದೇ ಸುದ್ದಿ .ಜನವರಿ ಬಂತೆಂದರೆ ಸಾಕು .ಏನಪ್ಪಾ ಈ ವರ್ಷ ಏಸ್ ನಾಟಕ ಅದವು ?ಯಾವ ನಾಟಕ ? ಅಂತ ಕೇಳೋರಾ ಜಾಸ್ತಿ .ನಾಟಕ ನೋಡಿದವರು ಹೇ! ಹೊಳಗುಂದಿ ಅಂದರ ಅದು ಕಲಾವಿದರ ಊರಪ್ಪೋ ನಾಟಕ ಆಡಿದ್ರ ಅವರಂಗ ಆಡ್ಬೇಕು ಅಬ್ಬಾಬ್ಬಾ ಅದೇನ್ ಕಥಿ !ಅದೆಂಥಾ ಅಭಿನಯ!! ಎಂಥ ಹಾಡ್ಕಿ ! ಎಂಥ ಹಾಸ್ಯ! ಹೇ ಹೌದೋಗು ಹೇಳಾಕ ಒಲ್ಲೆ ಬೆಳ್ಳ ಬೆಳತನ ಹಂಗ ಕುಂತ ನಾಟಕ ನೋಡಿದ್ವಿ ಒಂದೀಟರ ಬ್ಯಾಸರ ಬಂದೀತು ಸುದ್ದಿ ತಗಿಬ್ಯಾಡ ಹೌದಪ್ಪಾ ನಾಟಕ ಅಂದ್ರ ಇದಪಾ.. ನಮ್ಮೂರಿನ,ನಾಟಕ ನೋಡಿದ ಸುತ್ತ ಹತ್ತು ಹಳ್ಳಿಯ ಜನ ಹೀಗೆ ಮಾತಾಡ್ತಾರ ಅಂದ್ರ ಇದರಲ್ಲಿ ಯಾವ ಅತಿಶಯೋಕ್ತಿನೂ ಇಲ್ಲ. ಬಹುಶಃ ನಮ್ಮೂರಿನ ನಾಟಕದ ಯಶಸ್ಸಿಗೆ ಈ ಊರಿನ ಮಣ್ಣಿನ ಗುಣವೋ ಸಿದ್ದೇಶ್ವರನ ಕೃಪಾ ಕಟಾಕ್ಷವೋ ಹಿರಿಯ ಕಲಾವಿದರ ಆಶೀರ್ವಾದದ ಬಲವೋ ನಮ್ಮೂರಿನಲ್ಲಿ ರಂಗ ಕಲೆ ಬೆಳೆದಿದೆ ಉಳಿದಿದೆ ಹೊಳೆದಿದೆ. ಏಕೆಂದರೆ ನಮ್ಮೂರು ಸಿದ್ಧರ ಭೂಮಿಯಂತೆ ಹಾಗಾಗಿ ಇಲ್ಲಿಯ ಜನಕ್ಕೆ ರಂಗಭೂಮಿ ಒಲಿದಿದೆ ನಾಟಕ ಕಲೆ ಸಿದ್ಧಿಸಿದೆ.



ಎ.ಎಂ.ಪಿ ಸಂದೀಪ್



**ನಾಟಕ ರಚಿಸಿ ಇತಿಹಾಸ ಬರೆದ ಕವಿ**

ಹೊಳಗುಂದಿ ಕಲಾವಿದರ ತೌವರೂರು ಕಲೆಯ ನೆಲವೀಡು ಅಂತಲೇ ಹೆಸರಾಗಿದೆ.. ಹೊಳಗುಂದಿಯ ಕಲಾವಿದರು ಇದುವರೆಗು ಬೇರೆಬೇರೆ ಕವಿಗಳು ಬರೆದ ಪೌರಾಣಿಕ ಐತಿಹಾಸಿಕ ಸಾಮಾಜಿಕ ಅಧ್ಯಾತ್ಮಿಕ ನಾಟಕಗಳನ್ನು ಕಲಿತು ಅವುಗಳನ್ನು ಪ್ರದರ್ಶಿಸಿ ಕವಿಗಳ ಕೀರ್ತಿಯನ್ನು ಬೆಳಗಿದ್ದಾರೆ. ಆದರೆ ಈ ವರ್ಷ ನಮ್ಮೂರಿನ ರಂಗಭೂಮಿಯ ಮಹಾವೃಕ್ಷಕ್ಕೆ ಹೊಸ ಗರಿಯೊಂದು ಚಿಗುರೊಡೆದಿದೆ. ಅದುವೇ ನಮ್ಮೂರಿನ ಯುವ ಕವಿಯಾದ ಎ.ಎಂ.ಪಿ ಸಂದೀಪ್. ಈ ಯುವಕ "ದುಡುಕು ಬಲು ಕೆಡುಕು " ಎನ್ನುವ ಸಾಮಾಜಿಕ ನಾಟಕವನ್ನು ರಚಿಸುವ ಮೂಲಕ ಹೊಳಗುಂದಿಯ ರಂಗಭೂಮಿಯ ಇತಿಹಾಸಕ್ಕೆ ಕವಿಯಾಗಿ ಸೇರ್ಪಡೆಗೊಂಡದ್ದು, ಮತ್ತು ಕವಿಯ ಕೊರತೆಯನ್ನು ನೀಗಿದ್ದು ಒಂದು ಇತಿಹಾಸವೇ ಸರಿ. ಚಿಕ್ಕ ವಯಸ್ಸಿನಿಂದಲೂ ನಾಟಕ ನೋಡುತ್ತಾ ಬೆಳೆದ ಸಂದೀಪ್‌ನಿಗೆ ರಂಗಕಲೆ ಆತನಿಗೇ ಅರಿವಿಲ್ಲದಂತೆ ಆತನೊಳಗೆ ಸೇರಿದೆ ಜೊತೆಗೆ ಇತ್ತೀಚಿಗೆ ದೊರೆತ ಅಭಿನಯದ ಅವಕಾಶಗಳು ಆತನಲ್ಲಿ ರಂಗಕಲೆಯನ್ನು ಜಾಗೃತಗೊಳಿಸಿ ಆತ ಕವಿಯಾಗಿ ರೂಪಗೊಳ್ಳಲು ಪ್ರೇರಣೆ ನೀಡಿರಬೇಕು. ಇಂತಹ ಪ್ರಬುದ್ಧ ಕಥೆಯನ್ನು ಬರೆಯಬೇಕಾದರೆ ಆತನಿಗೆ ರಂಗಭೂಮಿಯ ಬಗೆಗಿನ ಒಲವು, ಅವರ ತಂದೆ ಎ.ಎಂ.ಪಿ ವಿಜಯಕುಮಾರ್ ಸುಮಾರು 25 ವರ್ಷಗಳ ಕಾಲ ರಂಗ ಸಂಘಟಕರಾಗಿ ನಾಡಕ ಕಲೆಗೆ ಸಲ್ಲಿಸಿದ ಸೇವೆ, ಕಲೆ ಉಳಿಸಬೇಕೆಂಬ ಈ ಯುವಕನ ತುಡಿತ ಏನನ್ನಾದರು ಸಾಧಿಸಬೇಕೆಂಬ ಹಂಬಲ ಜೊತಗೆ ಹಿರಿಯ ಕಲಾವಿದರ ಹಾಗೂ ಸ್ನೇಹಿತರ ಪ್ರೋತ್ಸಾಹ ಈ ಎಲ್ಲದರ ಒಟ್ಟು ಮೊತ್ತವೇ ಸಂದೀಪ್ ಕವಿಯಾಗಿ ರೂಪಗೊಂಡ.ಇದು ನಮ್ಮೂರಿನ ರಂಗ ಇತಿಹಾಸದಲ್ಲಿ ದೊಡ್ಡ ಮೈಲುಗಲ್ಲು. ಈ ಯುವ ಕವಿಯ ಕಲಾಕುಸುಮ ಅರಳಿ ನಾಡಿನಾದ್ಯಾಂತ ರಂಗ ಪರಿಮಳ ಸೂಸಲಿ ಕವಿ ಕೀರ್ತಿವಂತನಾಗಲಿ,ಹೊಳಗುಂದಿಯ ಕೀರ್ತಿ ಹೆಚ್ಚಲಿ ಎಂಬುದು ಕಲಾವಿದರ ಹರಕೆ ಹಾರೈಕೆಯಾಗಿದೆ.

**ನಾಟಕ ಕುರಿತು ಒಂದಷ್ಟು ಮಾತು.**

ಆತುರತೆ ಆಕ್ರೋಶ ಸೇಡು ಮೋಸ ಸಂಚು ಇವುಗಳೆಲ್ಲವೂ ಈ ಕಾಲಮಾನದ ನ್ಯೂನ್ಯತೆಗಳು ಈ ಮಿತಿಗೆ ಸಿಕ್ಕ ಯುವ ಮನಸ್ಸುಗಳು ದುಡುಕಿ ತಮ್ಮ ಬದುಕಿಗೆ ಕೇಡನ್ನು ಹೇಗೆ ತಂದುಕೊಳ್ಳುತ್ತಾರೆ ಎನ್ನುವುದೇ ಈ ಕಥೆಯ ಹೂರಣ. ಸಹಜ ಸಂಭಾಷಣಾ ಶೈಲಿ ಕಥೆಗೆ ತಕ್ಕ ದೃಶ್ಯ ನಿರ್ಮಾಣ, ತಿಳಿ ಹಾಸ್ಯ ಶೃಂಗಾರ ,ರೌದ್ರ ಶಾಂತ ಕರುಣೆ ,ನವರಸಗಳಿಂದ ತುಂಬಿದ ಈ ಕಲಾಕೃತಿ ಓದುಗ ಹಾಗೂ ನೋಡುಗರಿಗೆ ಈ ಕವಿಯ ಬಗ್ಗೆ ಹೊಸ ಭರವಸೆಯನ್ನು ಮೂಡಿಸುತ್ತದೆ. ಬರವಣಿಗೆಯ ಕುಂಚಕ್ಕೆ ಇನ್ನಷ್ಟು ಅನುಭದ ಶಾಹಿ ಮೆತ್ತಿಕೊಂಡರೆ ಇನ್ನೂ ಸುಂದರ ಕಲಾಕೃತಿಗಳು ಈ ಕವಿಯಿಂದ ರೂಪಗೊಳ್ಳುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಯುವ ಕವಿ ಮೊದಲ ಪ್ರಯತ್ನದಲ್ಲಿಯೇ ಯಶಕಂಡಿದ್ದಾರೆ ಎಂದರೆ ತಪ್ಪಾಗಲಾರದು. ಕಥೆ ಬರೆದು 5–6 ವರ್ಷಗಳೇ ಕಳೆದಿದ್ದರೂ ಅದಕ್ಕೆ ಪ್ರದರ್ಶನದ ಭಾಗ್ಯ ದೊರೆತಿರಲಿಲ್ಲ, ಆದರೆ ಈ ವರ್ಷ ಆ ಕೃತಿಗೆ ಬಿಡುಗಡೆ ಭಾಗ್ಯವೂ ಪ್ರದರ್ಶನದ ಫಲಿತವೂ ದೊರೆತಿರುವುದು ವಿಶೇಷವೇ ,ನಮ್ಮೂರಿನ ಉತ್ಸಾಹಿ ಕಲಾವಿದರು ಈ ನಾಟಕವನ್ನು ಅತ್ಯಂತ ಆಸಕ್ತಿಯಿಂದ ಅಭ್ಯಾಸ ಮಾಡಿ ಒಂದು ಉತ್ತಮ ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ.ಹೊಳಗುಂದಿ ಹಾಗೂ ಸುತ್ತ ಮುತ್ತಲಿನ ಕಲಾಬಂಧುಗಳು ನಾಟಕದ ರಸದೌತಣ ಸವಿಯಬೇಕಷ್ಟೇ ..ಆ ದಿನಕ್ಕಾಗಿ ಎಲ್ಲರೂ ತುದಿಗಾಲ ಮೇಲೆ ನಿಂತದ್ದಾರೆ.

**ಮರಳಿದ ರಂಗೋತ್ಸಾಹ**

ಕೊರೋನಾ ಸಮಯ ಹಾಗೂ ಕೊರೋನೋತ್ತರ ದಿನಗಳಲ್ಲಿ ನಮ್ಮೂರಿನ ರಂಗ ವೈಭವಕ್ಕೆ ಎಲ್ಲೋ ಒಂದು ಕಡೆ ಅಸಡ್ಡೆಯ ಧೂಳು ರಾಚಿ ಕೊಂಚ ಮಸಕಾಗಿದ್ದ ಈ ಕಲಾ ಪ್ರಕಾರ ಮತ್ತೆ ಈ ವರ್ಷ ಧೂಳನ್ನೆಲ್ಲಾ ಕೊಡವಿಕೊಂಡು ಮತ್ತೆ ಹಳೆಯ ವೈಭವಕ್ಕೆ ಮರಳುತ್ತಿದೆ. ಈ ವರ್ಷ ನಾಲ್ಕು ನಾಟಕಗಳು ಪ್ರದರ್ಶನ ಗೊಳ್ಳುತ್ತಿರುವುದು ಅತ್ಯಂತ ಸಂತಸದ ಸಂಗತಿ. ಒಂದು ಕಾಲಕ್ಕೆ ಏಳು ಸ್ಟೇಜುಗಳಲ್ಲಿ ಎರಡು ದಿನಕ್ಕೆ 10 ಕ್ಕೂ ಹೆಚ್ಚು ನಾಟಕಗಳು ಪ್ರದರ್ಶನಗೊಂಡಿದ್ದವು ಎಂದರೆ ಅದು ಸಾಮಾನ್ಯ ಮಾತಲ್ಲ ಕನ್ನಡ ನಾಡಿನ ಬಹುದೊಡ್ಡ ಜಾತ್ರೆಗಳಾದ ಬಾದಾಮಿ ಮೈಲಾರ ನಾಯಕನಹಟ್ಟಿ ಗುರುಗುಂಟಾ ಕೊಟ್ಟೂರು ತಿಂತಿಣಿ ಇಲ್ಲಿಯೂ ಕೂಡು ಏಳು ಕಂಪನಿಗಳು ಬಂದಿರಲಿಕ್ಕಿಲ್ಲ. ಆದರೆ ಹೊಳಗುಂದಿಯಂತಹ ಸಣ್ಣ ಹಳ್ಳಿಯಲ್ಲಿ 7 ಸ್ಟೇಜ್‌ನಲ್ಲಿ 10 ನಾಟಕ ಪ್ರದರ್ಶನಗೊಂಡಿದ್ದವೆಂದರೆ ಸಾಮಾನ್ಯ ವಿಷಯವೇ! ಈ ಊರಲ್ಲಿ ಅದೆಷ್ಟು ಜನ ಕಲಾವಿದರಿರಬಹುದು, ಕಲಾವಿದರನ್ನು ಇವರ ಪ್ರೋತ್ಸಾಹಿಸುವ ಕಲಾ ಮನಸ್ಸುಗಳು ಅದೆಷ್ಟಿರಬಹುದು ಊಹಿಸಲು ಅಸಾಧ್ಯ ಇಂತಹ ರೋಚಕ ಇತಿಹಾಸ ಈ ಊರಿನದ್ದಾಗಿದೆ. ಬಹುಶಃ ಕರ್ನಾಟಕದ ಯಾವ ಹಳ್ಳಿಗಳಲ್ಲಿಯೂ ಇಂತಹ ಒಂದು ಇತಿಹಾಸ ಇರಲಿಕ್ಕಿಲ್ಲ. ಇಂತಹ ವೈಭವದ ದಿನಗಳನ್ನು ಕಂಡ ಹೊಳಗುಂದಿ ರಂಗಭೂಮಿ ಕೊರೋನಾ ಕಾರಣದಿಂದಾಗಿಯೋ ಅಥವಾ ಇನ್ನಾವುದರ ಕಾರಣದಿಂದಾಗಿ ಕಳೆದ ಮೂರು ನಾಲ್ಕು ವರ್ಷಗಳಿಂದ ನಾಟಕಗಳು ಒಂದು ಅಥವಾ ಎರಡು ಇರುತ್ತಿದ್ದವು ಆದರೆ ಈ ವರ್ಷ ನಾಲ್ಕು ನಾಟಕಗಳ ಪ್ರದರ್ಶನಗೊಳ್ಳುವ ಮೂಲಕ ತನ್ನ ಹಳೆಯ ವೈಭವಕ್ಕೆ ಮತ್ತೆ ಮರಳುತ್ತಿರುವುದು ಸಂತಸದ ಸಂಗತಿ , ಇಂದಿನ ಯುವ ಪೀಳಿಗೆ ಈ ಕಲೆಯನ್ನು ಹೀಗೆಯೇ ಮುಂದುವರಿಸಲಿ ಹೊಳಗುಂದಿ ರಂಗಭೂಮಿಗೆ ಹೊಸ ಭಾಷ್ಯೆ ಬರೆಯಲಿ ಎಂದು ಹಾರೈಸುವೆ. ರಂಗ ಕಲೆ ಉಳಿಯಲಿ ಬೆಳಯಲಿ.

ಸಿದ್ದೇಶ್ವರ ಜಾತ್ರಗೆ ಬನ್ನಿ, ನಾಟಕ ನೋಡ ಬನ್ನಿ



**ಎ.ಎಂ.ಪಿ. ವೀರೇಶಸ್ವಾಮಿ**
**ಹೊಳಗುಂದಿ.**

---

**ಕವಿ ಮನಸು**

### ಶ್ರೀ ಶಿವಕುಮಾರ ಸ್ವಾಮಿ



ಹಸಿದ ಉದರಕ್ಕೆ ಉಣಿಸಲು
ಧರೆಗಿಳಿದು ಬಂದ ತಾಯಿ ಎನ್ನಲೇ.
ವಿದ್ಯಾದಾನ ಮಾಡಲು
ಅವತರಿಸಿದ
ಇಷ್ಟ ಲಿಂಗ ಪಾಣಿ ಎನ್ನಲೇ.
ಕಾಯಕಯೋಗಿ, ತ್ರಿವಿಧ ದಾಸೋಹಿ
ಎನ್ನಲೇ.
ವಿರಕ್ತ ಕೇಸರಿ ಎನ್ನಲೇ.
ಬಸವಣ್ಣನವರ ತತ್ವಗಳ ನಿಜರೂಪ
ಎನ್ನಲೇ.
ಇಲ್ಲ ಪ್ರತಿರೂಪ ಎನ್ನಲೇ.
ಕಲಿಯುಗದ ಕಲ್ಪತರು ನೀವು.
ಯುಗವನ್ನು ಆಳಿದ ಯೋಗಿ ನೀವು.
ನೇಸರನಂತೆ ನಿಮ್ಮ ನಾಮ
ನಮ್ಮ ಹೃದಯದಲ್ಲಿ ಸದಾ ಅಮರ
ಅಮರ!!

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

---

### ಓದೆಂಬ ಸೂತ್ರದಾರ

ಭಾಷಾಗೋಪುರ ಹೊನ್ನ ಕಳಸದೊಳು
ಅಲಂಕರಿಸಿದೆ ನಮ್ಮಓದು ತ್ರಿಸ್ಥಾನವ!
ಅಂತಃಕರಣದ ಹಸಿವ ನೀಗಿಸುತಾ
ಹೆಚ್ಚಿಸಿದೆ ಓದುಗನ ಅಭಿಮಾನವ!!

ಅಧಮಾಧಮರಿಗೆ ಅರ್ಥವೇ ಆಗದು
ಬಹುವಿಧ ಓದಿನ ಹಿಂದಿನ ಮಹತ್ವ!
ಅಂಧಶ್ರದ್ಧೆಯಲಿ ಅಜ್ಞಾನದ ಅಂದುಗೆ
ಹಿಡಿಯಲು ಬಿಡದು ಓದಿನ ಈಶತ್ವ!!

ಓದಲಿ ಶ್ರದ್ಧೆಯು ವಿನಯವದಿರಲು
ಹಿಡಿದಂತೆ ಅಂಕುಶ ವನ ಮದಗಜಕೆ!
ಜ್ಞಾನ ಸಾಧನೆಗೆ ಮೂಲವು ಒಂದೇ
ಅನವರತ ಓದುವ ತೀಕ್ಷ್ಣ ಹೆಬ್ಬಯಕೆ!!


ಪರಿಚಾರಕನಾಗು ಪರಿಘಾತಕನಾಗದೆ
ಓದುತ ಕಲಿಯುತ ನುಡಿವ ಭಾಷೆಗೆ!
ಅಪರಿಮಿತವಾಗಿರಲಿ ಓದುವ ಕಿಚ್ಚು
ಮಿತಿಯಿರಲಿ ಮಿತ್ಯ ಭೋಗ ತೃಷೆಗೆ!!

ತ್ರಿಕರಣ ಶುದ್ಧಿಗೆ ದಿವ್ಯ ಲೇಹ್ಯವಿದು
ಓದುಗನಾಗೇ ಜ್ಞಾನ ವಾರಿಸುದಾರ!
ದಶಪರಿಣಾಮಕೆ ಪಂಚಾಮೃತವಿದು
ಆತ್ಮ ಸಾಕ್ಷಾತ್ಕಾರಕೆ ಓದೇಸೂತ್ರದಾರ!!

**– ಶ್ರೀ ಶಿವರಾಜ್ ವಿ.**
ಸಹ ಶಿಕ್ಷಕರು. ಹೊಸಪೇಟೆ.

---

**ತುಂಗಭದ್ರಾ ನೀರಿನ ಮಟ್ಟ**



| ಬುಧವಾರ : 24-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.75 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 451 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.019 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1618.46 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8399 ಕ್ಯುಸೆಕ್ |
| ಸಾಮರ್ಥ್ಯ | 57.119 ಟಿಎಂಸಿ |

---

# ಆಡಳಿತ ಜನರ ಮನೆಬಾಗಿಲಿಗೆ

## ಜನರ ಮಧ್ಯೆ ನಡೆದು ಸಾರ್ವಜನಿಕರ ಅಹವಾಲು ಸ್ವೀಕಾರ





**ಮೊದಲ ಪುಟದಿಂದ**

**ಸ್ಥಳದಲ್ಲಿಯೇ ಆದೇಶ ಪತ್ರ ವಿತರಣೆ:** ಜನತಾ ದರ್ಶನದಲ್ಲಿ ಸಾರ್ವಜನಿಕರು ತಮ್ಮ ಅಹವಾಲು ಅರ್ಜಿಗಳನ್ನು ಸಲ್ಲಿಸುವ ಮುನ್ನ ಕೌಂಟರನಲ್ಲಿ ನೋಂದಾಯಿಸಲು ವ್ಯವಸ್ಥೆ ಮಾಡಿಸಲಾಗಿತ್ತು. ಬೆಳಗ್ಗೆ ಅರ್ಜಿ ಸಲ್ಲಿಸಿದ ಗೋಸಮ್ಮ ಅವರು ವಿದವಾ ವೇತನ ಮಾಸಾಶನ ಆದೇಶ, ಅಶ್ವತ್ಥಮ್ಮ ಅವರು ಸಂಧ್ಯಾ ಸುರಕ್ಷಾ ಮಾಸಾಶನ, ವಿಕಲಚೇತನ ಹುಲಗಪ್ಪ ಅವರು ಅಂಗವೀಕಲ ಪೋಷಣಾ ಮಾಸಾಶನ ಆದೇಶ ಪತ್ರಗಳನ್ನು ಸಚಿವರಿಂದ ಪಡೆದು ಸಂತಸ ವ್ಯಕ್ತಪಡಿಸಿದರು.

**ಜನರ ಮಧ್ಯೆ ತೆರಳಿ ಅಹವಾಲು ಆಲಿಕೆ:** ಕಾರ್ಯಕ್ರಮದ ಕೊನೆಯಲ್ಲಿ ಸಚಿವರು ವೇದಿಕೆಯಿಂದ ಕೆಳಗಿಳಿದು ಜನರ ಮಧ್ಯೆ ನಡೆದು ಸಾರ್ವಜನಿಕರ ಅಹವಾಲು ಆಲಿಸಿದರು. ಕಾರ್ಯಕ್ರಮವು ಶಿಸ್ತುಬದ್ಧವಾಗಿ ನಡೆಯುವಂತೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

**ನಿವಾಸಿಗಳಿಂದ ಜೈಕಾರ:** ಬೈಪಾಸ್ ರಸ್ತೆಯಲ್ಲಿನ ಜಂಬುನಾಥಹಳ್ಳಿಯ ಆಶ್ರಯ ಕಾಲೋನಿಯ ನಿವಾಸಿಗಳು ಸಚಿವರಿಗೆ ಅಹವಾಲನ್ನು ಸಲ್ಲಿಸಿದರು. ಈ ನಿವಾಸಿಗಳ ಎಲ್ಲ ಮನೆಗಳಿಗೆ ಹಾಕಿರುವ ದಂಡವನ್ನು ರದ್ದು ಮಾಡಿ ಮೀಟರ್ ಅಳವಡಿಸಲು ಕ್ರಮ ವಹಿಸಬೇಕು. ಪಟ್ಟಾ ಇಲ್ಲದ ಮನೆಗಳಿಗೆ ಪಟ್ಟಾ ಒದಗಿಸಲು ಪರಿಶೀಲಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಚಿವರ ಸ್ಪಂದನೆಗೆ ನಿವಾಸಿಗಳು ವೇದಿಕೆಯಲ್ಲಿಯೇ ಜೈಕಾರ ಕೂಗಿ ಸಚಿವರಿಗೆ ಧನ್ಯವಾದಗಳನ್ನು ತಿಳಿಸಿದರು.

**ಅರ್ಜಿಗಳ ನೋಂದಣಿ:** ಕಂದಾಯ ಇಲಾಖೆಗೆ ಹೆಚ್ಚಿನ ಅರ್ಜಿಗಳು ಸ್ವೀಕೃತವಾದವು. ಇನ್ನುಳಿದಂತೆ ಜಿಲ್ಲಾ ಪಂಚಾಯತ್‌ಗೆ 41, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 11, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅರಣ್ಯ ಇಲಾಖೆಗೆ ತಲಾ 1, ಆರೋಗ್ಯ ಇಲಾಖೆಗೆ 6 ಸೇರಿದಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಅರ್ಜಿಗಳ ನೋಂದಣಿಗೆ ವ್ಯವಸ್ಥೆ ಮಾಡಲಾಗಿತ್ತು. ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನರಾಜ್ ಸಿಂಗ್, ಜಿಲ್ಲಾ ಪಂಚಾಯತ್ ಸಿಇಓ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು, ಸಚಿವರ ಮಾಧ್ಯಮ ಸಲಹೆಗಾರರಾದ ಲಕ್ಷ್ಮಿನಾರಾಯಣ, ಹೊಸಪೇಟೆ ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ, ಹರಪನಹಳ್ಳಿ ಸಹಾಯಕ ಆಯುಕ್ತರಾದ ಪ್ರಕಾಶ, ತಹಸೀಲ್ದಾರ ವಿಶ್ವಜಿತ್ ಮೆಹತಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು. ಶಿಕ್ಷಕ ಕೆ.ಬಸವರಾಜ ನಿರೂಪಿಸಿದರು. ಬಿಇಓ ಎಂ.ಚನ್ನಬಸಪ್ಪ ವಂದಿಸಿದರು. ಕಮಲಾಪುರ ಪುರಸಭೆಯ ಸದಸ್ಯರು ಉಪಸ್ಥಿತರಿದ್ದರು.

---

# ನ್ಯಾಯಯಾತ್ರೆಗೆ ತಡೆ: ಅಸ್ಸಾಂ ಸರ್ಕಾರದ ಕರ್ತವ್ಯ ಲೋಪ

## ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಖಂಡನೆ




**ಮೈಸೂರು:** ಬಿಜೆಪಿಯವರು ನ್ಯಾಯ ಯಾತ್ರೆಗೆ ಉದ್ದೇಶಪೂರ್ವಕವಾಗಿಯೇ ಸಮಸ್ಯೆಗಳನ್ನು ಉಂಟುಮಾಡುತ್ತಿದ್ದಾರೆ. ಇದು ಸಂವಿಧಾನಬಾಹಿರವಾದ ಕ್ರಮ. ಒಬ್ಬ ಮುಖ್ಯಮಂತ್ರಿ ಸ್ಥಾನದಲ್ಲಿರುವವರು ಹೀಗೆಲ್ಲಾ ನಡೆದುಕೊಳ್ಳಬಾರದು. ಇದನ್ನು ತೀವ್ರವಾಗಿ ಖಂಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬುಧವಾರ ಪಿರಿಯಾಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಅಸ್ಸಾಂನಲ್ಲಿ ರಾಹುಲ್ ಗಾಂಧಿ ಅವರ ನ್ಯಾಯ ಯಾತ್ರೆಗೆ ತಡೆಯೊಡ್ಡಿರುವ ಅಸ್ಸಾಂ ಸರ್ಕಾರದ ನಡೆಯ ಬಗ್ಗೆ ಪ್ರಧಾನಿಗಳು ಹಾಗೂ ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದಿದ್ದರೂ ಪ್ರತಿಕ್ರಿಯೆ ನೀಡಿಲ್ಲ ಎಂಬ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಪ್ರತಿ ನಾಗರಿಕನಿಗೂ ಪಾದಯಾತ್ರೆ ಕೈಗೊಳ್ಳಲು ಅಥವಾ ಯಾವುದೇ ಸರ್ಕಾರದ ವಿರುದ್ಧ ಪ್ರತಿಭಟಿಸುವ ಸ್ವಾತಂತ್ರ್ಯವನ್ನು ಸಂವಿಧಾನ ಕೊಟ್ಟಿದೆ. ರಾಹುಲ್ ಗಾಂಧಿಯವರು ದೇಶದ ಜನರ ಸಮಸ್ಯೆಗಳನ್ನು ಅರಿಯಲು ಹಾಗೂ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಪಾದಯಾತ್ರೆ ಮಾಡುತ್ತಿದ್ದಾರೆ ಎಂದರು. ಪ್ರಚೋದನೆ ನೀಡುವುದು ಸಂವಿಧಾನಬಾಹಿರ ನೆಹರೂ ಕುಟುಂಬಕ್ಕೆ ಬೆದರಿಕೆಯಿದ್ದು, ಭಾರತ ಸರ್ಕಾರ ಹಾಗೂ ಅಸ್ಸಾಂ ರಾಜ್ಯ ಸರ್ಕಾರಗಳು ರಾಹುಲ್ ಗಾಂಧಿಯವರಿಗೆ ಸೂಕ್ತ ಭದ್ರತೆಯನ್ನು ಒದಗಿಸಬೇಕಾಗಿರುವುದು ಅವರ ಕರ್ತವ್ಯ.ಇದುಅವರಕರ್ತವ್ಯಲೋಪಎಸೆಗಿದಂತಾಗುತ್ತದೆ ಎಂದರು.

**ಪರಿಹಾರ:** ಪ್ರಧಾನಿಗಳ ಗಮನಕ್ಕೆ ತರಲಾಗಿದೆ ಕೇಂದ್ರಕ್ಕೆ ಭೇಟಿ ನೀಡಿ ಅಮಿತ್ ಷಾ ಅವರನ್ನು ಭೇಟಿ ನೀಡಿದಾಗ ಡಿಸೆಂಬರ್ 23 ರಂದು ಸಭೆ ಕರೆದು ಪಪರಿಹಾರ ಹಣವನ್ನು ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಆದರೆ ಇಂದಿನವರೆಗೂ ಬಿಡುಗಡೆಯಾಗಲ್ಲ. ಸಭೆ ಕರೆದು ಕಾರಣಾಂತರದಿಂದ ಮುಂದೂಡಿದರು. ಇತ್ತೀಚೆಗೆ ಪ್ರಧಾನಿಗಳು ರಾಜ್ಯಕ್ಕೆ ಭೇಟಿ ನೀಡಿದಾಗ ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದೇನೆ. ರಾಜ್ಯದ ರೈತರು ಬರಗಾಲದಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ, ಕೂಡಲೇ ಬಿಡುಗಡೆ ಮಾಡಿ ಎಂದು ಅವರಿಗೆ ನೆನಪು ಮಾಡಿದ್ದೇನೆ ಎಂದರು.

ವಾರದೊಳಗೆ ರೈತರಿಗೆ ಮೊದಲ ಕಂತು ಬಿಡುಗಡೆ ಇಂದಿನವರೆಗೆ ನಮ್ಮ ಸರ್ಕಾರ ದನಕರುಗಳಿಗೆ ಹಾಗೂ ಜನಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ, ಜನರು ಗುಳೇ ಹೋಗದಂತೆ ನಿಭಾಯಿಸಿದ್ದೇವೆ. 550 ಕೋಟಿ ರೂ.ಗಳನ್ನು ರೈತರಿಗೆ ಪರಿಹಾರವಾಗಿ ಈವರೆಗೆ ಮೊದಲ ಹಂತದಲ್ಲಿ ಬಿಡುಗಡೆ ಮಾಡಿದ್ದೇವೆ. ಇನ್ನೊಂದು ವಾರದೊಳಗೆ ಎಲ್ಲಾ ರೈತರಿಗೂ ಮೊದಲನೇ ಕಂತನ್ನು ತಲುಪಿಸುವ ಪ್ರಯತ್ನ ಮಾಡಲಾಗುವುದು ಎಂದರು.

**ಮೈಕ್ರೋ ನ್ಯೂಸ್**

## ಗಣರಾಜ್ಯೋತ್ಸವಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಕಡ್ಡಾಯ

**ಹಂಪಿ ಟೈಮ್ಸ್ ಬಳ್ಳಾರಿ**

ಜ.26 ರಂದು ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ರಾಜ್ಯ ಸರ್ಕಾರಿ ಕಚೇರಿಗಳು, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗಳು ಹಾಗೂ



ಸರ್ಕಾರಿ ಶಾಲಾ ಕಾಲೇಜು ಸೇರಿದಂತೆ ಸರ್ಕಾರದ ವತಿಯಿಂದ ನಡೆಯುವ ಎಲ್ಲಾ ಗಣರಾ ಜ್ಯೋತ್ಸವ ಸಮಾ ರಂಭಗಳಲ್ಲಿ ಭಾರತ ಸಂವಿಧಾನ ಪಿತಾಮಹ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡುವಂತೆ ಜಿಲ್ಲಾಡಳಿತ ತಿಳಿಸಿದೆ.

## ಅಂಬೇಡ್ಕರ್ ಮೂರ್ತಿಗೆ ಅವಮಾನ ಖಂಡಿಸಿ, ಆರೋಪಿಗಳಿಗೆ ಕಠಿಣ ಕ್ರಮಕ್ಕೆ ಎಸ್ಸಿ-ಎಸ್ಟಿ ನೌಕರರ ಆಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ**

ಕಲಬುರಗಿ ನಗರದ ಕೋಟನೂರ (ಡಿ) ಬಡಾವಣೆಯಲ್ಲಿ ಜ.22ರಂದು ಮಧ್ಯರಾತ್ರಿ ನಡೆದಿರುವ ಬಾಬಾಸಾಹೇಬ ಡಾ.ಬಿ.ಆರ್. ಅಂಬೇಡ್ಕರ್ ರವರ ಮೂರ್ತಿಗೆ ಅವಮಾನ ಮಾಡಿದ ಅಮಾನುಷ್ಯ ಘಟನೆಯನ್ನು ಖಂಡಿಸಿ, ಆರೋಪಿಗಳಿಗೆ ಕಾನೂನು ಕಠಿಣ ಕ್ರಮವನ್ನು ಜರುಗಿಸಲು ಹೊಸಪೇಟೆ ತಹಶೀಲ್ದಾರರ ಮೂಲಕ ವಿಜಯನಗರ ಜಿಲ್ಲಾ ಶಾಖೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನೌಕರರ ಸಂಘವು ಬುಧವಾರ ಸರ್ಕಾರಕ್ಕೆ ಆಗ್ರಹಿಸಿದೆ.

ಬಾಬಾ ಸಾಹೇಬ ಡಾ.ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆಗೆ ಅಪಮಾನ ಮಾಡಿರುವ ಯಾವ ವ್ಯಕ್ತಿಯೇ ಆಗಲಿ, ಯಾವ ಸಮುದಾಯದವರೇ ಆಗಲಿ ಅವರ ಮೇಲೆ ಕಾನೂನು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಇದು ವಿಶ್ವಮಾನವನಿಗೆ ಮಾಡಿದ ಅಪಮಾನ, ಇಡೀ ಜಗತ್ತೇ ಬಾಬಾಸಾಹೇಬ ರವರಿಗೆ ಗೌರವ ಕೊಡುವಾಗ, ಇಂತಹ ನಾಚಿಕೆಗೇಡು ದುಷ್ಕೃತ್ಯ ಎಸಗಿದವರಿಗೆ ಕಠಿಣ ಶಿಕ್ಷೆ ವಿಧಿಸಿದರೆ ಇನ್ನೊಬ್ಬರು ಇಂತಹ ಹೇಯ್ಯಕೃತ್ಯ ಮಾಡಲು ಹೆದರುವರು. ಇದು ಕೇವಲ ನಮ್ಮ ಸಮುದಾಯಕ್ಕೆ ಅಲ್ಲ ಇಡೀ ವಿಶ್ವಕ್ಕೆ ಮಾನವ ಜಾತಿಗೆ ಮಾಡಿದಂತ ಅಪಮಾನವನ್ನು ವಿಜಯನಗರ ಜಿಲ್ಲಾ ಶಾಖೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನೌಕರರ ಸಂಘದ ಪದಾಧಿಕಾರಿಗಳು ತೀವ್ರವಾಗಿ ಖಂಡಿಸಿ, ತಹಶಿಲ್ದಾರರವರ ಮುಖಾಂತರ ಸಿಎಂಗೆ ಮನವಿ ಪತ್ರ ಸಲ್ಲಿಸಿದರು. ಎಲ್ಲಾ ಸಮಾಜದ ಮಹಾನ್ ವ್ಯಕ್ತಿಗಳ ಪುತ್ತಳಿಯ ಸುತ್ತ-ಮುತ್ತ ಸಿ.ಸಿ.ಕ್ಯಾಮೇರಾವನ್ನು ಅಳವಡಿಸಿ, ಅದನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ಮಹಾ ಆಯುಕ್ತರ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಪ್ರತಿ ದಿನ ವೀಕ್ಷಣೆ ಮಾಡುವ ವ್ಯವಸ್ಥೆಯಾಗಬೇಕು ಎಂದು ವಿಜಯನಗರ ಜಿಲ್ಲಾ ಎಸ್ಸಿ-ಎಸ್ಟಿ ನೌಕರರ ಸಂಘವು ಸರ್ಕಾರಕ್ಕೆ ಈ ಮೂಲಕ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಎಸ್ಸಿ-ಎಸ್ಟಿ ನೌಕರರ ಸಂಘದ ಗೌರವಾಧ್ಯಕ್ಷ ಬಿಸಟ್ಟಿ ತಾಯಪ್ಪ ನಾಯಕ, ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಜಿಲ್ಲಾಧ್ಯಕ್ಷ ಅಜಯ್ ಮದಕರಿ, ಉಪಾಧ್ಯಕ್ಷ ಪಿ. ಕೃಷ್ಣಸ್ವಾಮಿ, ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್, ಸಂಘಟನಾ ಕಾರ್ಯದರ್ಶಿಗಳಾದ ಟಿ.ಕೆ. ಮಾರುತಿ ಹಾಗೂ ಹನುಮಂತ ರಾಜೇಂದ್ರ ಕಬ್ಬಡಿ ಸೇರಿದಂತೆ ತಾಲೂಕು ಅಧ್ಯಕ್ಷರು, ಕಾರ್ಯದರ್ಶಿಗಳು ಖಜಂಚಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.




# ಹೆಣ್ಣು ಕುಟುಂಬದ ಕಣ್ಣು

### ಡಿಹೆಚ್‌ಓ ಡಾ. ವೈ. ರಮೇಶ್ ಬಾಬು ಹೇಳಿಕೆ | ಗಂಡು-ಹೆಣ್ಣು ಸಮಾನ



**ಹಂಪಿ ಟೈಮ್ಸ್ ಬಳ್ಳಾರಿ**

ಹೆಣ್ಣು ಮಗುವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದ್ದು, ಈ ದಿಶೆಯಲ್ಲಿ ಕುಟುಂಬದ ಸ್ವಾಸ್ಥ್ಯವನ್ನು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಭಾರತೀಯ ವೈದ್ಯಕೀಯ ಸಂಘ ಬಳ್ಳಾರಿ, ಜಿಲ್ಲಾ ಆಸ್ಪತ್ರೆ, ಎ.ಎನ್.ಎಮ್ ತರಬೇತಿ ಕೇಂದ್ರ, ಮಹಿಮಾ ನರ್ಸಿಂಗ್ ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ "ಹೆಣ್ಣು ಮಗು ಉಳಿಸಿ" ಎಂಬ ಆಶಯದಡಿ ರಾಷ್ಟ್ರೀಯ ಹೆಣ್ಣು ಮಗು ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ಕಾರ ಹೆಣ್ಣು ಮಗುವಿನ ಉಳಿವಿಗಾಗಿ ಭ್ರೂಣ ಲಿಂಗಪತ್ತೆ ತಂತ್ರ ನಿಷೇಧ ಕಾಯ್ದೆ 1994ರ ಕಾಯ್ದೆ ಅಡಿಯಲ್ಲಿ ಹೆಣ್ಣು ಭ್ರೂಣ ಪತ್ತೆ ಮಾಡುವವರನ್ನು ಮತ್ತು ಕೇಳುವವರನ್ನು ಜೈಲು ಶಿಕ್ಷೆ ಹಾಗೂ ದಂಡವಿದೆ. ಕಾಯ್ದೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ದಂಡ ಹೆಚ್ಚಿಸುವ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಕುಟುಂಬದ ಕಣ್ಣಾಗಿರುವ ಹೆಣ್ಣನ್ನು ಬೆಳೆಸಿ, ಉಳಿಸಿ, ಓದಿಸುವ ಮೂಲಕ ಭವ್ಯ ಭಾರತದ ಅಡಿಪಾಯಕ್ಕೆ ನಾವೆಲ್ಲರೂ ಕಟ್ಟಬದ್ದರಾಗಬೇಕಿದೆ ಎಂದು ಕರೆ ನೀಡಿದರು.

ಭಾರತೀಯ ವೈದ್ಯಕೀಯ ಸಂಘದ ಪದಾಧಿಕಾರಿ ಡಾ.ರವಿಶಂಕರ್ ಸಜ್ಜಲ್ ಅವರು ಮಾತನಾಡಿ, ಹೆಣ್ಣು ಮಗುವಿನ ಸುರಕ್ಷತೆಗಾಗಿ ಮತ್ತು ಹೆಣ್ಣು ಮಗುವಿನ ಉಳಿವಿಗಾಗಿ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲಾ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳಲ್ಲಿ ಯಾವುದೇ ಸಂದರ್ಭದಲ್ಲಿ ಸ್ಕ್ಯಾನಿಂಗ್ ಕೇಂದ್ರಗಳಲ್ಲಿ ಹೆಣ್ಣು ಮಗುವಿನ ಭ್ರೂಣವನ್ನು ಹೇಳದಂತೆ ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತಿದ್ದು, ಸಾರ್ವಜನಿಕರು ಸಹ ಭ್ರೂಣದ ಮಾಹಿತಿಯನ್ನು ಕೇಳಬಾರದು ಎಂದು ವಿನಂತಿಸಿದ ಅವರು, ಸಮಾಜದ ಎರಡು ನಾಣ್ಯಗಳಾದ ಗಂಡು-ಹೆಣ್ಣಿಗೆ ಸಮಾನ ಅವಕಾಶಗಳನ್ನು ನಾವೆಲ್ಲರೂ ನೀಡಬೇಕೆಂದು ತಿಳಿಸಿದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಅವರು ಮಾತನಾಡಿ, ಸಮಾಜದ ಸ್ವಾಸ್ಥ್ಯ ಕಾಪಾಡಲು ಗಂಡು-ಹೆಣ್ಣು ನಾಣ್ಯದ ಎರಡು ಮುಖಗಳು ಇರುವಂತೆ ಕುಟುಂಬದ ಹೆಣ್ಣು ಮಗು ನೂರು ಗಂಡು ಮಕ್ಕಳಿಗೆ ಸಮವಾಗಿದ್ದಾಳೆ. ಪ್ರಸ್ತುತ ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣು ಮಗಳ ಸಾಧನೆ ದೇಶಕ್ಕೆ ಮುಕುಟವಾಗುವಂತೆ ಸಾಧನೆಗಳನ್ನು ಮಾಡುತ್ತಿದ್ದು, ಹಲವಾರು ಕ್ರೀಡಾಪಟುಗಳು ರಾಜಕೀಯ ಕ್ಷೇತ್ರಗಳಲ್ಲಿಯೂ ಇದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಹೆಣ್ಣು ಮಗುವನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕೆಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಪೂರ್ಣಿಮ ಕಟ್ಟಿಮನಿ, ಐಎಂಎ ಕಾರ್ಯದರ್ಶಿ ಡಾ. ರಾಘವೇಂದ್ರ, ಉಪಾಧ್ಯಕ್ಷ ಡಾ.ಮಾಣಿಕ್ ರಾವ್ ಕುಲಕರ್ಣಿ, ಜಂಟಿ ಕಾರ್ಯದರ್ಶಿ ಡಾ.ಸಂಗೀತ ಕಟ್ಟಿಮನಿ, ಮಹಿಮಾ ಸಂಸ್ಥೆಯ ಡಾ. ಮಲ್ಲಿಕಾರ್ಜುನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ, ಕುಟುಂಬ ಕಲ್ಯಾಣ ಕಾರ್ಯಕ್ರಮ ವಿಭಾಗದ ಅರುಣ್ ಕುಮಾರ್, ಗೋಪಾಲ್.ಕೆ.ಎಚ್., ನವೀನ್, ಎ.ಎನ್.ಎಮ್ ತರಬೇತಿ ಕೇಂದ್ರದ ಶಿವಪ್ಪ ಜಾಥಾದಲ್ಲಿ ಭಾಗವಹಿಸಿದ್ದರು. ಜಾಥಾವು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಾಯಿತು.



ಹೊಸಪೇಟೆಯಲ್ಲಿ ಆರೋಗ್ಯ ಇಲಾಖೆ ಡಿಎಚ್‌ಓ ಶಂಕರನಾಯ್ಕ, ಸಿಇಓ ಸದಾಶಿವ ಪ್ರಭು ಸೇರಿದಂತೆ ಆರೋಗ್ಯ ಸಿಬ್ಬಂದಿ, ಮಕ್ಕಳು, ಮಹಿಳೆಯರು ಕ್ಯಾಂಡಲ್ ಹಿಡಿದು ಹೆಣ್ಣು ಮಗು ಉಳಿಸಿ ಜಾಗೃತಿ ಮೂಡಿಸಿರು.

## ಕಾಲುವೆಗೆ ನೀರು ಹರಿಸಲು ಶಾಸಕ ಗವಿಯಪ್ಪ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಕ್ಷೇತ್ರದ ಶಾಸಕರಾದ ಹೆಚ್.ಆರ್. ಗವಿಯಪ್ಪ ಅವರು ಜನವರಿ 24ರಂದು ತುಂಗಭದ್ರಾ ಡ್ಯಾಮ್ ಆವರಣಕ್ಕೆ ತೆರಳಿ ವಿಜಯನಗರದ ಕಾಲುವೆಗಳಿಗೆ ನೀರು ಹರಿಸಲು ಚಾಲನೆ ನೀಡಿದರು.

ಇದೆ ವೇಳೆ ಮಾತನಾಡಿದ ಶಾಸಕರು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಮತ್ತು ಕಾಡಾ ಅಧ್ಯಕ್ಷರಾದ ಶಿವರಾಜ ತಂಗಡಗಿ ಅವರ ಸಹಕಾರದೊಂದಿಗೆ ತಮ್ಮ ನಿರಂತರ ಪ್ರಯತ್ನದ ಫಲವಾಗಿ ಮೇ 30ರವರೆಗೆ ದಿನ ಬಿಟ್ಟು ದಿನದಂತೆ ವಿಜಯನಗರದ ಕಾಲುವೆಗಳಿಗೆ ನೀರು ಹರಿಸಲಾಗುತ್ತಿದೆ ಎಂದು ತಿಳಿಸಿದರು.

ಶಾಶ್ವತವಾಗಿ ಮೇ.30ರವರೆಗೆ ನೀರು ಹರಿಸುತ್ತಿರುವುದರಿಂದಾಗಿ ಅಂದಾಜು 12,000 ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಹಾಗೂ ಅಂದಾಜು 5000 ಎಕರೆಯಲ್ಲಿ ಬಾಳೆ ಬೆಳೆಯುವುದಕ್ಕೆ ಸಹಾಯವಾಗಲಿದೆ ಎಂದು ತಿಳಿಸಿದರು. ಕುಡಿಯುವ ನೀರಿಗೆ ಆದ್ಯತೆ ನೀಡಿದಂತೆ ಬೆಳೆದು ನಿಂತ ಬೆಳೆಗೆ ಸಹ ಆದ್ಯತೆ ನೀಡಿ ನೀರು ಹರಿಸಲು ಸರ್ಕಾರವು ಆದೇಶಿಸಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಪಕ್ಷದ ಮುಖಂಡರುಗಳ ಉಪಸ್ಥಿತರಿದ್ದರು.

## ಪ್ರವಾಸಿ ಮಾರ್ಗದರ್ಶಿಗಳಿಗೆ ಗೌರವಧನ ಹೆಚ್ಚಿಸಲು ಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ:**

ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ನಿಯೋಗ ಬುಧವಾರ ಮಾಜಿ ಸಂಸದ ವಿಎಸ್ ಉಗ್ರಪ್ಪ ನೇತೃತ್ವದಲ್ಲಿ ಕಾನೂನು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಬೇಡಿಕೆಗಳನ್ನು ಸಲ್ಲಿಸಿದರು.




ರಾಜ್ಯ ಮಾರ್ಗದರ್ಶಿಗಳ ನಿಯೋಗದ ಅಹವಾಲು ಸ್ವೀಕರಿಸಿ ಮಾತನಾಡಿದ ಸಚಿವರು, ಪ್ರವಾಸೋದ್ಯಮ ಕೇಂದ್ರಗಳನ್ನು ಸ್ಥಾಪಿಸಿ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ತಿಂಗಳಗಳಿಂದ ನಿಂತಿರುವ ಗೌರವ ಧನವನ್ನು ಶೀಘ್ರದಲ್ಲೇ ನೀಡುತ್ತೇವೆ ಎಂದು ತಿಳಿಸಿದರು. ಪ್ರಸ್ತುತ ಗೈಡ್ ಗಳಿಗೆ ನೀಡುತ್ತಿರುವ ಗೌರೋಧನದ ಮೊತ್ತ ರೂ.5000/- ಬದಲಿಗೆ ರೂ 7500/- ಹೆಚ್ಚಿಸಲು ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಿದರು ರಾಜ್ಯದ ಪ್ರವಾಸಿ ಮಾರ್ಗದರ್ಶಿಗಳಿಗೆ ಏಕ ಮಾದರಿಯ ಸಮವಸ್ತ್ರವನ್ನು ನೀಡಲಾ ಗುವುದು. ಗೈಡ್ ಗಳಿಗೆ ಆಗುವ ತೊಂದರೆಗಳನ್ನು ಹಿನ್ನೆಲೆಯಲ್ಲಿ ಗೈಡ್ ಗಳಿಗೆ ಇನ್ಶುರೆನ್ಸ್ ಪಾಲಿಸಿ ವ್ಯವಸ್ಥೆ ಜಾರಿಗೊಳಿಸಲು ಸರ್ಕಾರ ಚಿಂತನೆ ಮಾಡುತ್ತಿದೆ. ಗೈಡ್ ಗಳಿಗೆ ಗುಣಮಟ್ಟ ತರಬೇತಿಯನ್ನು ನೀಡಲು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಮತ್ತು ಕನ್ನಡ ವಿಶ್ವವಿದ್ಯಾಲಯ ಹಂಪಿಯೊಂದಿಗೆ ಸರ್ಟಿಫಿಕೇಟ್ ಕೋರ್ಸ್ ಅನ್ನು ಆರಂಭಿಸ ಲಾಗುವುದು. ಗೈಡ್ ಪರವಾನಗಿ ಅವಧಿ ಮೂರು ವರ್ಷದಿಂದ ಐದು ವರ್ಷದ ಗಳವರೆಗೆ ನವೀಕರಣ ಅವಧಿಯನ್ನು ವಿಸ್ತರಿಸಲಾಗುವುದು. ರಾಜ್ಯದ 34 ಪ್ರವಾಸಿ ಮಾರ್ಗದರ್ಶಿಗಳಿಗೆ ಎರಡು ವರ್ಷದಿಂದ ನೀಡದೇ ಇರುವ ಗೌರವಧನವನ್ನು ನೀಡಲು ಕ್ರಮವನ್ನು ವಹಿಸುತ್ತೇನೆ ಎಂದು ತಿಳಿಸಿದರು.

ಸಂದರ್ಭದಲ್ಲಿ ಮಾಜಿ ಸಂಸದ ವಿ ಎಸ್ ಉಗ್ರಪ್ಪ, ರಾಜ್ಯ ಮಾರ್ಗದರ್ಶಿಗಳ ಸಂಘದ ರಾಜ್ಯದ್ಯಕ್ಷ ಮಂಜುನಾಥ್ ಗೌಡ, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಿ ವಿ ಹಂಪಿ, ಊ.ಹುಲುಗಪ್ಪ, ಎಸ್ ದೇವರಾಜ್, ಶ್ರೀನಿವಾಸ್, ಅಶೋಕ, ಮೋಹಿದೀನ್ ಖಾನ್ ಮತ್ತು ರಾಜ್ಯ ಸಂಘದ ಪದಾಧಿಕಾರಿಗಳು, ಪ್ರವಾಸಿ ಮಾರ್ಗದರ್ಶಿಗಳು ಇದ್ದರು

## ವಿಶೇಷ ಚೇತನರಲ್ಲೇ ಭೇದಭಾವ ಮಾಸಾಶನ ತಾರತಮ್ಯ ಸಲ್ಲದು

### ನಗರ ಗ್ರಾಮೀಣ ವಿಕಲಚೇತನರಿಂದ ಪ್ರತಿಭಟನೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರ ಮತ್ತು ಗ್ರಾಮೀಣ ಘಟಕ ಹಾಗೂ ಮಯೂರಿ ಮಹಿಳಾ ವಿಕಲಚೇತನರ ಸಂಘಟನೆ ವತಿಯಿಂದ ಇಂದು ವಿಶೇಷಚೇತನರ ಮಾಸಿಕ ಪೋಷಣ ಭತ್ಯೆ ಹೆಚ್ಚಿಸುವ ಕುರಿತು ಹಾಗೂ ಏಕರೂಪ ಪೋಷಣ ಭತ್ಯೆ ಜಾರಿ ಮಾಡ ಬೇಕೆಂದು ತಹಶೀಲ್ದಾರರ ದ್ವಾರ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಲಾಯಿತು. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ವಿಶೇಷ ಚೇತನರಿಗೆ ನೀಡಲಾಗುವ ಮಾಸಾಶನವು ಅಂಗವಿಕಲತೆ ಪ್ರಮಾಣ ಶೇಕಡ 40ಕ್ಕೂ ಮೇಲ್ಪಟ್ಟು ಹಾಗೂ ಶೇಕಡ 75ರ ಒಳಗಿನ ವಿಶೇಷ ಚೇತನರಿಗೆ ರೂಪಾಯಿ. 800, ಶೇಕಡ 75ಕ್ಕೂ ಹಾಗೂ ಅದಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವ ವಿಶೇಷ ಚೇತನರಿಗೆ ಮಾಸಿಕ ರೂಪಾಯಿ 1400, ಅಂಗವಿಕಲತೆ ಪ್ರಮಾಣ ಶೇಕಡ 75ಕ್ಕಿಂತಲೂ ಹೆಚ್ಚು ಹೊಂದಿರುವ ಮನೋಚೇತನರಿಗೆ (ಬುದ್ಧಿಮಾಂದ್ಯರಿಗೆ) ಮಾಸಾಶನ ರೂ. 2,000 ನೀಡಲಾಗುತ್ತಿದೆ. ಇದು ವಿಶೇಷ ಚೇತನರಲ್ಲೇ ಭೇದಭಾವ ಉಂಟುಮಾಡುವಂತಾಗಿದೆ. ಒಮ್ಮೆ ಅಂಗವಿಕಲತೆ ಬಂದಿತೆಂದರೆ ಅದು ಶಾಶ್ವತವಾಗಿ ಹಾಗೆ ಇರುತ್ತದೆ. ದೈಹಿಕವಾಗಿ ಶ್ರಮವಹಿಸಿ ಮಾಡುವ ಕೆಲಸಗಳು ವಿಶೇಷ ಚೇತನರಿಗೆ ಮಾಡಲಾಗುವುದಿಲ್ಲ. ವಿಶೇಷ ಚೇತನರು ತಮ್ಮ ಅಂಗವಿಕಲತೆಯಿಂದಾಗಿ ಇತರ ಕೆಲವು ಕಾಯಿಲೆಗಳಿಂದಲೂ ಸಹ ಬಳಲುತ್ತಿದ್ದಾರೆ. ಅದಕ್ಕೆ ಬೇಕಾದ ಚಿಕಿತ್ಸಾ ವೆಚ್ಚವಾಗಲಿ ಅಥವಾ ಔಷಧಿಗಳಿಗಾಗಲಿ ಈಗ ನೀಡುತ್ತಿರುವ ಮಾಸಾಶನ ಸಾಲುವುದಿಲ್ಲ ಆದ್ದರಿಂದ ಸರ್ಕಾರವು ಫೆಬ್ರವರಿ 16ರಂದು ಮಂಡಿಸಲಿರುವ ಬಜೆಟ್ ನಲ್ಲಿ ಎಲ್ಲಾ ಬಗೆಯ ಅಂಗವಿಕಲತೆಯನ್ನು ಹೊಂದಿರುವ ವಿಶೇಷ ಚೇತನರಿಗೂ ಏಕರೂಪ ಮಾಶಾಸನ ರೂಪಾಯಿ 3,000 ಘೋಷಿಸಬೇಕೆಂದು ಮನವಿ ಮಾಡಲಾಯಿತು. ಮನವಿ ಪತ್ರವನ್ನ ಶಿರಸ್ತೆದಾರರಾದ ನವೀನ್ ಅವರು ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳುವೆವು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರ ಘಟಕ ಆಧ್ಯಕ್ಷರಾದ ಲೋಹಿತ್ ತಳವಾರ್, ಸಂಘಟನೆಯ ಸಲಹೆಗಾರರಾದ ಎನ್ ವೆಂಕಟೇಶ್, ಹುಲಿಗೆಮ್ಮ, ಮುಖಂಡರಾದ ಹುಲುಗಪ್ಪ ಕೆ, ಮುಕ್ಕಣ್ಣ.ಕೆ ರಾಜಸಾಬ್, ಹಜ್ರಾತ್ ಅಲಿ,ತಾಯಣ್ಣ, ಗುಜ್ಜಲ್ ನಾಗರಾಜ್, ಪರಶುರಾಮ್, ದಾದಾಪೀರ್, ಮಾಬಾಷ, ಲಕ್ಷ್ಮಿ, ಮಂಜುಳಾ, ನೂರ್ ಜಾನ್, ಚಾಂದ್ ಬೀ, ಇತರರಿದ್ದರು.

## ಫೆ. 8 ರಂದು ವಿಧಾನಸೌಧದ ಎದರು ಸಿಎಂರಿಂದ ರಾಜ್ಯಮಟ್ಟದ ಜನಸ್ಪಂದನ

**ಹಂಪಿ ಟೈಮ್ಸ್ ಹೊಸಪೇಟೆ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರುವರಿ 8 ರಂದು ವಿಧಾನಸೌಧದ ಮುಂಭಾಗದಲ್ಲಿ ರಾಜ್ಯಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲಿದ್ದು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಸ್ಥಳದಲ್ಲಿಯೇ ಪರಿಹಾರ ಸೂಚಿಸಲಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರು ಇಂದು ಪೂರ್ವಸಿದ್ಧತಾ ಸಭೆ ನಡೆಸಿ, ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಜನಸ್ಪಂದನ ಕಾರ್ಯಕ್ರಮವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಬೇಕು. ಮುಖ್ಯಮಂತ್ರಿಯವರು ನಡೆಸುತ್ತಿರುವ ಎರಡನೇ ಜನಸ್ಪಂದನ ಕಾರ್ಯಕ್ರಮ ಇದಾಗಿದ್ದು, ಎಲ್ಲ ಇಲಾಖೆಗಳ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಹಾಜರಿದ್ದು, ವಿಶೇಷ ಆಸಕ್ತಿ ವಹಿಸಿ ಕುಂದು ಕೊರತೆ ನಿವಾರಣೆಗೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಜನಸ್ಪಂದನ ಕಾರ್ಯಕ್ರಮಕ್ಕೆ ಆಗಮಿಸುವ ವಿಶೇಷಚೇತನರು, ಹಿರಿಯನಾಗರಿಕರಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡುವಂತೆ ಸೂಚಿಸಿದರು.

ಸ್ವಚ್ಛತೆ, ಕುಡಿಯುವ ನೀರು, ಲಘು ಉಪಾಹಾರ, ಊಟದ ವ್ಯವಸ್ಥೆಗಳನ್ನು ಮಾಡುವ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕಳೆದ ಬಾರಿಯ ಜನಸ್ಪಂದನದಲ್ಲಿ ಸ್ವೀಕರಿಸಿದ ಅರ್ಜಿಗಳ ತ್ವರಿತ ವಿಲೇವಾರಿ ಮಾಡುವ ಬಗ್ಗೆ ಎಲ್ಲ ಇಲಾಖೆಗಳಿಗೆ ಪತ್ರ ಬರೆಯುವುದಾಗಿ ತಿಳಿಸಿದ ಅವರು ಕೆಡಿಪಿ ಸಭೆಯಲ್ಲಿಯೂ ಜನಸ್ಪಂದನ ಅರ್ಜಿ ವಿಲೇವಾರಿ ಪ್ರಗತಿ ಪರಿಶೀಲನೆ ನಡೆಸುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಮಾಡಲಾಗುವುದು. ಜನಸ್ಪಂದನಕ್ಕೆ ಆಗಮಿಸುವ ಜನರ ಅನುಕೂಲಕ್ಕಾಗಿ ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಕ್ಕೆ ಉಚಿತ ಬಸ್ ವ್ಯವಸ್ಥೆ ಮಾಡಲು ಸೂಚಿಸಿದರು.

ವಿವಿಧ ಇಲಾಖೆಗಳ ಅರ್ಜಿ ಸ್ವೀಕಾರಕ್ಕೆ ಪ್ರತ್ಯೇಕ ಕೌಂಟರುಗಳನ್ನು ಸ್ಥಾಪಿಸಿ, ಅದಕ್ಕೆ ಅಗತ್ಯವಿರುವ ಎಲ್ಲ ಉಪಕರಣಗಳನ್ನೂ ಒದಗಿಸಲು ಹಾಗೂ ಸಿಬ್ಬಂದಿಯನ್ನೂ ನಿಯೋಜಿಸಲು ಇ-ಆಡಳಿತ ಇಲಾಖೆಗೆ ಸೂಚಿಸಿದರು. ಮನವಿದಾರರ ದೂರುಗಳನ್ನು ಪರಿಶೀಲಿಸಿ, ನಿಗದಿತ ಕೌಂಟರುಗಳಿಗೆ ತೆರಳಲು ಸೂಕ್ತ ಮಾರ್ಗದರ್ಶನ ನೀಡಲು ಪ್ರವೇಶ ದ್ವಾರದಲ್ಲಿಯೇ ಅಧಿಕಾರಿ, ಸಿಬ್ಬಂದಿಗಳ ಫೆಸಿಲಿಟೇಷನ್ ತಂಡವನ್ನು ನಿಯೋಜಿಸುವಂತೆ ನಿರ್ದೇಶನ ನೀಡಿದರು. ಅಂದಿನ ದಿನ ವಿಧಾನಸೌಧದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲು ಹಾಗೂ ಸಂಚಾರ ನಿರ್ವಹಣೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ತಿಳಿಸಿದರು.

ಸಭೆಯಲ್ಲಿ ಮುಖ್ಯಮಂತ್ರಿಯವರ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ, ಇ-ಆಡಳಿತ ಇಲಾಖೆ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಸಹನಾ ಎಂ. ಮತ್ತು ವಿವಿಧ ಇಲಾಖೆಗಳ ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

## AFFIDAVIT

I, **K E CHERIYAN** S/o T K Das, R/o House No.538, 28th Ward, Basalingappa compound lane, Beside BDCC Bank H. Basanna House, Chapparadahalli Hospet-583201., Karnataka.

My name is in Adhar Card as **K E CHERIYAN** and in Bank account my name is as **CHARIYAN** the above both names are same and belongs to me only. vide affidavit dated 24-01-2024 before Notary K.SURABHI DURGA at Hosapete-583201

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA